ಸ್ಥಾಪನೆ : 1934

ಮೊಬೈಲ್ : 9380301904
ದೂರವಾಣಿ : 22281848

# ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ
ನಂ. 17, ಶೇಷಾದ್ರಿ ರಸ್ತೆ, ಬೆಂಗಳೂರು – 560009

Reg. No. 246/34-35

# ಕ್ಷೇಮ ಸಮಾಚಾರ ಪತ್ರಿಕೆ

ಸಂಪುಟ 36, ಸಂಚಿಕೆ 13 ಆಂತರಿಕ ಪತ್ರಿಕೆ ಏಪ್ರಿಲ್ – 2024







**ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿ**
**12.05.2024, ಭಾನುವಾರ**



**ಪದ್ಮಭೂಷಣ ಪದ್ಮಶ್ರೀ**
**ಡಾ. ಎಸ್.ಎಲ್. ಭೈರಪ್ಪ ಅವರಿಗೆ**
**ಆಚಾರ್ಯ ಬಿ.ಎಂ.ಶ್ರೀ**
**ಪ್ರಶಸ್ತಿ ಪ್ರದಾನದ ಸಂದರ್ಭ**

# ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ,

Reg.No. 246/34-35 ನಂ. 17, ಶೇಷಾದ್ರಿ ರಸ್ತೆ, ಬೆಂಗಳೂರು – 560 009. ದೂರವಾಣಿ : 080–22281848

## ಆಡಳಿತ ಮಂಡಳಿ–2020–25



ಡಾ॥ ಎ.ವಿ. ಪ್ರಸನ್ನ
ಅಧ್ಯಕ್ಷರು



ಡಾ॥ ಬಿ.ಕೆ. ಪ್ರಭಾಕರ್
ಉಪಾಧ್ಯಕ್ಷರು



ಡಾ॥ ಎನ್. ಸತ್ಯಪ್ರಕಾಶ್
ಗೌ॥ ಕಾರ್ಯದರ್ಶಿ



ಶ್ರೀ ಹೆಚ್.ಎಂ. ನಾಗಭೂಷಣ
ಖಜಾಂಚಿ



ಶ್ರೀ ಕೆ.ಆರ್. ಉದಯಕುಮಾರ್
ಸಹಕಾರ್ಯದರ್ಶಿ



ಶ್ರೀ ರಮೇಶ್ ಜೋಯಿಸ್ ಎಂ.ವಿ
ಆಂತರಿಕ ಲೆಕ್ಕಪರಿಶೋಧಕರು

## ಸದಸ್ಯರುಗಳು




ಶ್ರೀ ಜಿ.ವಿ. ರಮೇಶ್



ಶ್ರೀಮತಿ ಕೆ. ಶೀಲಾ



ಶ್ರೀ ಗುರುದತ್ತ ಪಿ.ಎಸ್



ಶ್ರೀ ನಾಗರಾಜ್ ಕೆ.ಎಸ್



ಶ್ರೀ ಎನ್. ಶಿವಮೂರ್ತಿ



ಶ್ರೀಮತಿ ಸುಮಾ ಪ್ರಕಾಶ್

## ಕೋ–ಆಪ್ಟೆಡ್ ಸದಸ್ಯರು



ಶ್ರೀ ನಾಗರಾಜ್ ಎಸ್.ಎಂ



ಶ್ರೀಮತಿ ಸುಧಾ ಪ್ರಸಾದ್



ಶ್ರೀ ಎಲ್.ಎನ್. ಪ್ರಸಾದ್

ಸ್ಥಾಪನೆ : 1934

# ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ, ನಂ. 17, ಶೇಷಾದ್ರಿ ರಸ್ತೆ, ಬೆಂಗಳೂರು-560009.
ದೂ.: 22281848, 9380301904 । ವೆಬ್‌ಸೈಟ್ : www.babboorkamme.org

## ಆಹ್ವಾನ ಪತ್ರಿಕೆ

## ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿ

**ಹಾಗೂ ಬಬ್ಬೂರುಕಮ್ಮೆ ಇಬ್ಬರು ಸಾಧಕರಿಗೆ ವಿಶ್ವ ವಿಪ್ರತ್ರಯೀ ಪರಿಷತ್ ಕೊಡ ಮಾಡುವ**

## ಶ್ರೀ ಶಂಕರ ಪ್ರಶಸ್ತಿ ಪ್ರದಾನ ಸಮಾರಂಭ

**ದಿನಾಂಕ** : 12-05-2024 ನೇ ಭಾನುವಾರ, ವೈಶಾಖ ಶುದ್ಧ ಪಂಚಮಿಯಂದು
**ಬೆಳಗ್ಗೆ** : 10-30 ಘಂಟೆಗೆ ಸಮಿತಿಯ ಸಭಾಂಗಣದಲ್ಲಿ ಆಚರಿಸಲಾಗುವುದು.

**ಮುಖ್ಯ ಅತಿಥಿಗಳು :**

**ಡಾ. ಆರ್.ಎನ್. ನಾಗರಾಜ್**
ಸಂಸ್ಕೃತ ವಿದ್ವಾಂಸರು ಹಾಗೂ ಚಿಂತಕರು, ಬೆಂಗಳೂರು

**ವಿಶೇಷ ಅತಿಥಿಗಳು :**

**ನ್ಯಾಯಮೂರ್ತಿ ಎನ್. ಕುಮಾರ್**
ನಿವೃತ್ತ ನ್ಯಾಯಾದೀಶರು, ಕರ್ನಾಟಕ ಉಚ್ಛನ್ಯಾಯಾಲಯ

**ಶ್ರೀ ಎಸ್. ರಘುನಾಥ್**
ಅಧ್ಯಕ್ಷರು, ವಿಶ್ವ ವಿಪ್ರತ್ರಯೀ ಪರಿಷತ್

**ಅಧ್ಯಕ್ಷತೆ :**


**ಡಾ|| ಎ.ವಿ. ಪ್ರಸನ್ನ**
ಅಧ್ಯಕ್ಷರು, ಬಬ್ಬೂರುಕಮ್ಮೆ ಸೇವಾ ಸಮಿತಿ, ಬೆಂಗಳೂರು

**ಸಮಿತಿಯ ಅಧ್ಯಕ್ಷರಾದ ಡಾ. ಎ.ವಿ.ಪ್ರಸನ್ನ ಹಾಗೂ ಶ್ರೀಮತಿ ನಿರ್ಮಲಾ ಪ್ರಸನ್ನ ದಂಪತಿಗಳು ಜಗದ್ಗುರುಗಳ ಪೂಜೆಯನ್ನು ನಡೆಸಿಕೊಡಲಿದ್ದಾರೆ.**

ತಾವುಗಳು ಬಂಧು, ಬಾಂಧವರೊಡನೆ ಆಗಮಿಸಿ ಶ್ರೀ ಶಂಕರಾಚಾರ್ಯರ ಜಯಂತಿಯಲ್ಲಿ ಭಾಗವಹಿಸಿ ಗುರುಕೃಪೆಗೆ ಪಾತ್ರರಾಗಬೇಕಾಗಿ ಕೋರಿ ತಮ್ಮೆಲ್ಲರಿಗೂ ಸ್ವಾಗತವನ್ನು ಬಯಸುತ್ತೇವೆ.

ಆಡಳಿತ ಮಂಡಳಿಯ ಪರವಾಗಿ
**ಡಾ. ಎನ್. ಸತ್ಯಪ್ರಕಾಶ್**
ಕಾರ್ಯದರ್ಶಿ

ಕಾರ್ಯಕ್ರಮದ ನಂತರ ಪ್ರಸಾದ ಭೋಜನ ವ್ಯವಸ್ಥೆ ಇರುತ್ತದೆ.



# ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿ

### ಹಾಗೂ ಬಬ್ಬೂರುಕಮ್ಮೆಗೆ ವಿಶ್ವ ವಿಪ್ರತ್ರಯೀ ಪರಿಷತ್ ಕೊಡ ಮಾಡುವ

# ಶ್ರೀ ಶಂಕರ ಪ್ರಶಸ್ತಿ ಪ್ರದಾನ ಸಮಾರಂಭ

## ಕಾರ್ಯಕ್ರಮಗಳು

ಬೆಳಗ್ಗೆ : 8-30 ರಿಂದ 9.45 ರವರೆಗೆ ಆಚಾರ್ಯ ಶಂಕರರಿಗೆ ಅಭಿಷೇಕ,
ಪೂಜೆ, ಮಹಾಮಂಗಳಾರತಿ ಹಾಗೂ ಪಾನಕಪೂಜೆ

ಬೆಳಗ್ಗೆ 10.30 ರಿಂದ ಸಭಾ ಕಾರ್ಯಕ್ರಮ & ಸಾಂಸ್ಕೃತಿಕ ಕಾರ್ಯಕ್ರಮ

* ಪ್ರಾರ್ಥನೆ
* ಸ್ವಾಗತ ಹಾಗೂ ಪರಿಚಯ – ಕಾರ್ಯದರ್ಶಿಗಳಿಂದ
* ಅತಿಥಿಗಳಿಗೆ ಗೌರವಾರ್ಪಣೆ – ಅಧ್ಯಕ್ಷರಿಂದ
* ಶ್ರೀ ಶಂಕರ ಸಂದೇಶ – ಮುಖ್ಯ ಅತಿಥಿಗಳಿಂದ
* ಶ್ರೀ ಶಂಕರ ಪ್ರಶಸ್ತಿ ಪ್ರದಾನ
* ಪ್ರಶಸ್ತಿ ಪತ್ರ ವಾಚನ
* ಶ್ರೀ ಶಂಕರ ಪ್ರಶಸ್ತಿ ಪುರಸ್ಕೃತರ ನುಡಿಗಳು
* ವಿಶೇಷ ಅತಿಥಿಗಳಿಂದ ನುಡಿಗಳು
* ಅಧ್ಯಕ್ಷರ ನುಡಿಗಳು
* ವಂದನಾರ್ಪಣೆ : ಡಾ. ಬಿ.ಕೆ. ಪ್ರಭಾಕರ್
* ನಿರೂಪಣೆ : ಶ್ರೀಮತಿ ಸುಧಾ ಪ್ರಸಾದ್
* ಪ್ರಸಾದ ಭೋಜನ



## ಅಧ್ಯಕ್ಷರ ನುಡಿ.....

**ಪ್ರಿಯ ಬಂಧುಗಳೇ,**

ತಮಗೆಲ್ಲರಿಗೂ ಕ್ರೋಧಿನಾಮ ಸಂವತ್ಸರದ ಯುಗಾದಿಯ ಹಾರ್ದಿಕ ಶುಭಾಶಯಗಳು.

ಇತ್ತೀಚೆಗೆ ನಡೆದ ಬಳಗಕೂಟ ಮತ್ತು ಡಾ. ಎಸ್.ಎಲ್. ಭೈರಪ್ಪನವರಿಗೆ "ಬಿ.ಎಂ.ಶ್ರೀ ಪ್ರಶಸ್ತಿ" ಪ್ರದಾನ ಸಮಾರಂಭಗಳು ಅಭೂತಪೂರ್ವವಾಗಿ ನಡೆದಿವೆ. ಇದಕ್ಕೆ ಮುಖ್ಯ ಕಾರಣ ನಮ್ಮ ಬಬ್ಬೂರುಕಮ್ಮೆ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಉತ್ಸಾಹದಿಂದ ಭಾಗವಹಿಸಿದುದು. ಇದಕ್ಕಾಗಿ ನಾನು ತಮ್ಮೆಲ್ಲರಿಗೂ ಆಭಾರಿಯಾಗಿದ್ದೇನೆ.

ಪ್ರತಿವರ್ಷವೂ ನಾವು ಆಚರಿಸುತ್ತಿರುವ ಶ್ರೀ ಶಂಕರಭಗವತ್ಪಾದರ ಜಯಂತಿಯನ್ನು ಈ ವರ್ಷವೂ ಸಹ ಅಷ್ಟೇ ವೈಭವದಿಂದ ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆಗಳನ್ನು ಮಾಡುತ್ತಿದ್ದೇವೆ. 12.05.2024ರಂದು ಭಾನುವಾರ ಬಬ್ಬೂರುಕಮ್ಮೆ ಸೇವಾ ಸಮಿತಿಯ ಸಭಾಂಗಣದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ತಾವೆಲ್ಲರೂ ಭಾಗವಹಿಸಿ ಶ್ರೀ ಮದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿಸುತ್ತೇನೆ.

ಸಮಿತಿಯ ಎಲ್ಲಾ ಚಟುವಟಿಕೆಗಳೂ ಉತ್ತಮವಾಗಿ ನಡೆಯುತ್ತಿವೆ. ಸಮಿತಿಯ ಕಾರ್ಯ ಚಟುವಟಿಕೆಯಲ್ಲಿ ತಮ್ಮೆಲ್ಲರ ಸಹಕಾರ ಸಹಾಯಗಳು ಹೀಗೆಯೇ ಮುಂದುವರಿಯಲಿ ಎಂದು ವಿನಂತಿಸುತ್ತೇನೆ.

ಗೌರವಗಳೊಂದಿಗೆ
ತಮ್ಮವನೇ ಆದ
**ಡಾ॥ ಎ.ವಿ. ಪ್ರಸನ್ನ**
ಅಧ್ಯಕ್ಷರು ಹಾಗೂ ಪ್ರಧಾನ ಸಂಪಾದಕರು

**ದಿನಾಂಕ : 12.04.2024**

**ಸ್ಥಳ : ಬೆಂಗಳೂರು.**

# ಸಂಪಾದಕರ ನುಡಿ.....

ಆತ್ಮೀಯ ಬಂಧುಗಳೇ,

ಸಾದರ ಪ್ರಣಾಮಗಳು. ಶ್ರೀ ಕ್ರೋಧಿ ಸಂವತ್ಸರದ ಹೊಸ ವರುಷ ಯುಗಾದಿಯ ನಂತರ ಶ್ರೀ ಶಂಕರ ಭಗವತ್ಪಾದರ ಜಯಂತಿ ಮೇ 12ರಂದು ಭಾನುವಾರ ನಡೆಸಲಾಗುತ್ತದೆ. ಶಂಕರರು ಜೀವನದ ಎಲ್ಲಾ ಆಯಾಮಗಳನ್ನು ಸಂಸ್ಕರಿಸಿ ಉದಾತ್ತೀಕರಿಸಿದವರು. ಲೋಕದಲ್ಲಿ ಧರ್ಮಗ್ಲಾನಿಯುಂಟಾದಾಗ ಧರ್ಮದ ಪುನಃಸ್ಥಾಪನೆಗಾಗಿ ಭಗವದವತಾರವಾಗುತ್ತದೆ ಎಂಬ ನಂಬಿಕೆಗೆ ಶ್ರೀ ಶಂಕರರು ಅವಿರ್ಭಾವಗೊಂಡದ್ದು ಮತ್ತು ಅವರ ಜೀವನ ಸಾಧನೆ ಉತ್ಕೃಷ್ಟ ನಿದರ್ಶನವಾಗಿದೆ. ಶಂಕರರು ಬೌದ್ಧಿಕ ಸ್ತರದಲ್ಲಿ ವೇದಾಂತದರ್ಶನದ ತಳಹದಿ ರೂಪಿಸಿದರು. ವಿವಿಧ ಉಪಾಸನಾಧಾರೆಗಳ ನಡುವೆ ಸಮನ್ವಯ ಸಾಧ್ಯ ಎಂಬುದನ್ನು ನಿರೂಪಿಸಿದರು. ಎಲ್ಲರಿಗೂ ಅಂಗೀಕಾರ್ಯವಾದ ಪೂಜಾ ಪದ್ಧತಿಯನ್ನು ವಿನ್ಯಾಸಗೊಳಿಸಿದರು. ನಾಲ್ಕು ವೇದಗಳನ್ನು ಪ್ರತಿನಿಧಿಸುವಂತೆ ದೇಶದ ನಾಲ್ಕೂ ದಿಕ್ಕಿನಲ್ಲಿ ನಾಲ್ಕು ಆಮ್ನಾಯಪೀಠಗಳನ್ನು ಸ್ಥಾಪಿಸಿದರು. ಹಾಗಾಗಿ ಶ್ರೀ ಶಂಕರರು ಕೇವಲ ದಾರ್ಶನಿಕರಷ್ಟೇ ಅಲ್ಲದೆ ಅಸಮಾನ ಸಮಾಜ ಸಂಘಟಕರೂ ಆಗಿದ್ದರು. ಪಾರಮಾರ್ಥಿಕ ಮತ್ತು ಸಾಮಾಜಿಕ ಈ ಎರಡೂ ಆಯಾಮಗಳಲ್ಲಿ ಶಂಕರಭಗವತ್ಪಾದರಿಂದ ಮೌಲ್ಯ ಸಂಸ್ಥಾಪನೆಯಾಯಿತು. ಭಗವಂತನ ಸರ್ವವ್ಯಾಪಿತ್ವ ಕಾರಣದಿಂದ ಸರ್ವಸಮಾನತೆ ಮತ್ತು ಜ್ಞಾನ ಪಾರಮ್ಯದ ಕಾರಣದಿಂದ ನಿರ್ಭೀತಿ ಇವು ಶಂಕರರ ವೇದಾಂತದ ಎರಡು ಪ್ರಮುಖ ಸರ್ವಕಾಲೀನ ಮೌಲ್ಯಗಳು. ಶಂಕರರ ಮೌಲ್ಯಗಳ ಆಚರಣೆಗೆ ನಮಗೆ ನಾವೇ ಸಂಕಲ್ಪಮಾಡಿಕೊಳ್ಳಬೇಕಾದ ಒಂದು ಸದವಕಾಶವಾಗಿದೆ.

ಶಂಕರರ ತತ್ವ ಸಿದ್ಧಾಂತಗಳನ್ನು ಅರಿಯುವ, ತನ್ಮೂಲಕ ನಮ್ಮೊಳಗಿನ ಬುದ್ಧಿ, ಭಾವಗಳನ್ನು ನೋಡುವ ನಾನು ಎಂಬ ಪರಂಜ್ಯೋತಿಯ ಸಾಕ್ಷಾತ್ಕಾರ ಮಾಡಿಕೊಳ್ಳುವ ಒಂದು ತಪಸ್ಸಿಗೆ ಅಣಿಯಾಗಬೇಕಾದ ದಿನ. ಸಮುದಾಯದ ಯುವಕರು ಹೆಚ್ಚು ಹೆಚ್ಚು ಶಂಕರರ ಜೀವನ ಸಾಧನೆ ಮತ್ತು ಅವರ ತತ್ವ ಸಿದ್ಧಾಂತಗಳ ಅಧ್ಯಯನ ಮಾಡಬೇಕು. ತನ್ಮೂಲಕ ಚಿತ್ತಶುದ್ಧಿ, ಜ್ಞಾನನಿಷ್ಠೆ ಪಡೆದು ಲೋಕೋತ್ತರವಾದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು.


ಶ್ರೀ ಶಂಕರಭಗವತ್ಪಾದರ ಜಯಂತಿಯನ್ನು ಎಂದಿನಂತೆ ಸಮಿತಿಯು ಮೇ 12ರಂದು ಭಾನುವಾರ ಬಬ್ಬೂರು ಕಮ್ಮೆ ಸೇವಾಸಮಿತಿಯ ಸಮುದಾಯ ಭವನದಲ್ಲಿ ಆಚರಿಸಲಿದ್ದು ಎಲ್ಲಾ ಸಮುದಾಯ ಬಾಂಧವರು ಭಾಗವಹಿಸಿ ಶ್ರೀ ಶಂಕರರ ಕೃಪಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಕೋರುತ್ತಿದ್ದೇವೆ. ಸಮಿತಿಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದವರು ತಮ್ಮ ತಮ್ಮ ಮನೆಗಳಲ್ಲಿ, ಊರುಗಳಲ್ಲಿ ಶಂಕರ ಭಗವತ್ಪಾದರ ಜಯಂತಿ ಆಚರಿಸಿ ಉಪನ್ಯಾಸ, ಸೌಂದರ್ಯಲಹರಿ, ವಿಷ್ಣುಷಟ್ಪದೀ ಸ್ತೋತ್ರ, ಮೋಹಮುದ್ಗರಃ ಪಠಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಶಂಕರರ ಮೌಲ್ಯ,ಸಿದ್ಧಾಂತಗಳನ್ನು ಪ್ರಚುರಪಡಿಸುವ ಮಹತ್ಕಾರ್ಯದಲ್ಲಿ ತೊಡಗಿಕೊಳ್ಳೋಣ. ಯೋಗಕ್ಷೇಮ ಸಮಾಚಾರ ಪತ್ರಿಕೆಯ ಪ್ರಧಾನ ಸಂಪಾದಕರೂ, ಸಮಿತಿಯ ಅಧ್ಯಕ್ಷರೂ ಆದ ಡಾ.ಎ.ವಿ.ಪ್ರಸನ್ನ ಅವರಿಗೆ, ಪತ್ರಿಕೆಯ ಸಂಚಾಲಕ ತುರುವೇಕೆರೆ ಪ್ರಸಾದ್, ಸದಸ್ಯರಾದ ಶ್ರೀಮತಿ ಕೆ.ಶೀಲಾ, ಶ್ರೀಮತಿ ಸುಮಾ ಪ್ರಕಾಶ್ ಹಾಗೂ ಸಮಿತಿಯ ಎಲ್ಲಾ ಸದಸ್ಯರಿಗೆ ನಾನು ಆಭಾರಿ. ಶ್ರೀ ಶಂಕರರು ಸರ್ವರಿಗೂ ಸನ್ಮಂಗಳವನ್ನುಂಟು ಮಾಡಲಿ. ಸರ್ವೇ ಜನಾಃ ಸುಖಿನೋ ಭವಂತು.

ಇಂತೀ

**ಡಾ. ಎನ್. ಸತ್ಯಪ್ರಕಾಶ್**

ಗೌ॥ ಕಾರ್ಯದರ್ಶಿಗಳು ಹಾಗೂ ಸಂಪಾದಕರು

# ಅವಿದ್ಯಾ ನಿವೃತ್ತಿ – ಶಂಕರಾಚಾರ್ಯರ ದೃಷ್ಟಿಯಲ್ಲಿ



– ಸಂಪಿಗೆ ಗುರುಪ್ರಸಾದ

**ಶ್ರುತಿಸ್ಮೃತಿ ಪುರಾಣಾನಾಂ ಆಲಯಂ ಕರುಣಾಲಯಮ್।**
**ನಮಾಮಿ ಭಗವತ್ಪಾದ ಶಂಕರಂ ಲೋಕಶಂಕರಂ॥**
**ಶಂಕರಃ ಶಂಕರಃ ಸಾಕ್ಷಾತ್ ವ್ಯಾಸೋ ನಾರಾಯಣಃ ಸ್ವಯಮ್।**
**ತಯೋರ್ವಿವಾದೇ ಸಂಪ್ರಾಪ್ತೇ ನ ಜಾನೇ ಕಿಂ ಕರೋಮ್ಯಹಮ್॥**

ಅಧ್ಯಾತ್ಮ ಎಂದರೆ ಅಧಿ+ಆತ್ಮ. ಒಳಗಿನ ಆತ್ಮ. ಅರ್ಥಾತ್ ಅದು ಒಬ್ಬನ ಹೃದಯಕಮಲದಲ್ಲಿ ಎಲ್ಲಕ್ಕೂ ಸಾಕ್ಷಿಯಾಗಿರುವ ಬ್ರಹ್ಮವಸ್ತುವದು. ಎಲ್ಲಕ್ಕೂ ಸಾಕ್ಷಿಯಾಗಿರುವುದು ಅಂದರೆ "ದೃಕ್ ದೃಶ್ಯ ವಿವೇಕ"ವು ತಿಳಿಸುವಂತೆ

**ರೂಪಂ ದೃಶ್ಯಂ ಲೋಚನಂ ದೃಕ್ ತದ್ದೃಶ್ಯಂ ದೃಕ್ತು ಮಾನಸಮ್।**
**ದೃಶ್ಯಾ ಧೀವೃತ್ತಯಃ ಸಾಕ್ಷೀ ದೃಗೇವ ನ ತು ದೃಶ್ಯತೇ॥**

ಬಾಹ್ಯ ವಸ್ತುವಿನ ರೂಪವನ್ನು ಕಣ್ಣು ನೋಡುತ್ತದೆ. ಮನಸ್ಸು ಕಣ್ಣನ್ನು ನೋಡುತ್ತದೆ. ಸಾಕ್ಷಿಯು (ಆತ್ಮವು) ಮನಸ್ಸನ್ನು ನೋಡುತ್ತದೆ. ಆದರೆ ಸಾಕ್ಷಿಯು ಯಾವುದಕ್ಕೂ ದೃಶ್ಯವಾಗದೆ ಎಲ್ಲವನ್ನೂ ನೋಡುತ್ತಿರುತ್ತದೆ.

ಅದರ ಬಗ್ಗೆ ತಿಳಿಯುವ ವಿಚಾರವು ಅಧ್ಯಾತ್ಮ ವಿದ್ಯೆ. ತನ್ನ ಸ್ವಸ್ವರೂಪವೇ ಬ್ರಹ್ಮ, ಆತ್ಮ, ಪರಮಾತ್ಮ, ಅಥವಾ ಪರಬ್ರಹ್ಮ. ಹೀಗೆ ತನ್ನ ಸ್ವಸ್ವರೂಪವನ್ನು ತಿಳಿಯುವ ವಿದ್ಯೆಯೇ ಅಧ್ಯಾತ್ಮ ವಿದ್ಯೆ ಅಥವಾ ಆತ್ಮವಿದ್ಯೆ ಅಥವಾ ಬ್ರಹ್ಮಜ್ಞಾನ ಅಥವಾ ಬ್ರಹ್ಮವಿದ್ಯೆ ಎನ್ನುವರು. ಇದನ್ನು ಅರಿಯುವುದು ಅಂದರೆ ಅನುಭವಕ್ಕೆ ತಂದುಕೊಳ್ಳುವುದು. ಇದೇ ಜನ್ಮದ ಗುರಿ. ಆಗಲೇ ಹುಟ್ಟಿನ ಸಾರ್ಥಕ.

ಏನಿದು ಈ ಆತ್ಮ? ಏನಿದರ ಸ್ವಭಾವ? ಮುಂತಾದ ಪ್ರಶ್ನೆಗಳು ಏಳುವುದು ಸಾಮಾನ್ಯ ಜನರಿಗೆ ಸಹಜ. ನಿರಾಕಾರ, ನಿರ್ಗುಣ, ಅವ್ಯಕ್ತ, ಎಲ್ಲವನ್ನೂ ವ್ಯಾಪಿಸಿರುವ, ಸರ್ವಾಂತರ್ಯಾಮಿ, ನಿತ್ಯ, ಶುದ್ಧ, ಬುದ್ಧ, ಅಜ, ಅಮರ, ಅಕ್ಷರ, ಅವಿನಾಶಿ, ಏಕಮೇವಾದ್ವಿತೀಯ ಮುಂತಾದ ಇನ್ನೂ ಹೆಚ್ಚಿನ ವಿಶೇಷಣಗಳಿಂದಲೂ ವರ್ಣಿತವಾದರೂ ಅನಿರ್ವಚನೀಯವಾದ, ಕಡೆಗೆ ತನ್ನ ಲೀಲೆಯಿಂದ ಕ್ಷಣಮಾತ್ರದಲ್ಲಿ ಈ ಭೌತಿಕ ಪ್ರಪಂಚವನ್ನು ಸೃಷ್ಟಿಸಿ ಎಲ್ಲರನ್ನೂ ಸಲಹುತ್ತಿರುವುದೇ ಬ್ರಹ್ಮ.

ಏಕಮೇವಾದ್ವಿತೀಯ ಅಂದರೆ "ಏಕಂ ಏವ" ಅದು ಕೇವಲ ಒಂದೇ ಒಂದು ಮತ್ತು ಅದ್ವಿತೀಯ ಅರ್ಥಾತ್ ಅದರಂತೆಯೇ ಎರಡನೆಯದು ಇನ್ನೊಂದು ಇಲ್ಲ ಎಂದು. ಎರಡಲ್ಲದ್ದು. ಬ್ರಹ್ಮ ವಸ್ತು ಅದ್ವಿತೀಯ ಮತ್ತು ನಿತ್ಯ. ಪ್ರಪಂಚ ಮತ್ತು ಅಲ್ಲಿರುವೆಲ್ಲವೂ ಮಿಥ್ಯೆ ಮತ್ತು ಅನಿತ್ಯವಾದವುಗಳು. ಅದಕ್ಕೆ ಶಂಕರಾಚಾರ್ಯರು "ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ" ಎಂದು ಹೇಳಿದ್ದಾರೆ. ಬ್ರಹ್ಮವೊಂದೇ ಸತ್ಯ ಜಗತ್ತೆಲ್ಲವೂ ಮಿಥ್ಯೆ ಅಂದರೆ ತೋರಿಕೆ. ದೇಹದಲ್ಲಿರುವ ಜೀವನು ಹಾಗೂ ಬ್ರಹ್ಮನು ಬೇರೆ ಅಲ್ಲವೇ ಅಲ್ಲ. ಅವೆರಡು ಒಂದೇನೆ. ಇದನ್ನೇ ಅದ್ವೈತ ಎನ್ನುವರು. ದ್ವೈತವಲ್ಲದ್ದು ಅಂದರೆ ಎರಡಲ್ಲದ್ದು, ಎರಡಿಲ್ಲದ್ದು ಎಂದು.

ಹಾಗಿದ್ದರೆ ಮನಸ್ಸು ಮತ್ತು ಇಂದ್ರಿಯಗಳು ಒಳಭಾಗಕ್ಕೆ ತಿರುಗದೆ ಏಕೆ ಹೊರಪ್ರಪಂಚದ ವಿಷಯಗಳನ್ನು

ನೋಡುವುದು? ಏಕೆಂದರೆ ತನ್ನ ಮೂಲಸ್ವರೂಪವನ್ನು ತಿಳಿಯದಿರುವುದು. ಇದನ್ನು ಅಜ್ಞಾನ, ಅವಿದ್ಯೆ ಎನ್ನುವರು. ಅಜ್ಞಾನ ಒಂದು ಪದಾರ್ಥವಲ್ಲ. ಕೇವಲ 'ಜ್ಞಾನದ ಅಭಾವ'. ಹೇಗೆ ಕತ್ತಲೆಯು ಒಂದು ಪದಾರ್ಥವಲ್ಲವೋ ಹಾಗೆ. ಅದು ಬೆಳಕಿನ ಅಭಾವ ಮಾತ್ರ. ಬೆಳಕು ಬಂದ ಕೂಡಲೇ ಕತ್ತಲೆ 'ಇರುವುದಿಲ್ಲ'. "ಕಾ ಅವಿದ್ಯಾ"? ಯದಾತ್ಮನೋ ಅಸ್ಫೂರ್ತಿಃ. "ಕಾ ವಿದ್ಯಾ"? ಯದಾತ್ಮನಃ ಸ್ಫೂರ್ತಿಃ.

ಈ ಅಜ್ಞಾನ ಅವಿದ್ಯೆಯಿಂದ ಬಾಹ್ಯ ಪ್ರಪಂಚದ ಎಲ್ಲಾ ವ್ಯವಹಾರಗಳು ನಿಜವೆಂದು ಭ್ರಮೆ ಬಂದು, ಆ ವ್ಯವಹಾರಗಳಲ್ಲಿ ಆಸಕ್ತಿ ಹುಟ್ಟುವುದು. ಆಸಕ್ತಿಯಿಂದ ಆಸೆ, ಆಸೆಯಿಂದ ಬೇಕು ಎನ್ನುವ ಬಯಕೆ, ಆ ಬಯಕೆಯಿಂದ ತಾನು ಪಡೆಯಲೇ ಬೇಕೆಂಬ ಉತ್ಕಟೇಚ್ಛೆ, ಇಚ್ಛೆಯಿಂದ ಸುಖ ಮತ್ತು ಸುಖದಿಂದ ದುಃಖ. ಮರೀಚಿಕೆಯಂತಿರುವ ಈ ಪ್ರಯತ್ನದ ತತ್ಕಾಲದಲ್ಲಿ ತನ್ನ ಹುಟ್ಟಿನ ಕಾರಣವನ್ನೇ ಮರೆತು ಮನುಷ್ಯನು ಶೋಕಸಾಗರದಲ್ಲಿ ಮುಳುಗಿ ಇರಲೂ ಆಗದೆ ಅನುಭವಿಸಲೂ ಆಗದೆ ತೊಳಲಾಟಕ್ಕೆ ಸಿಕ್ಕುವನು. ಕಾರಣ ಇಷ್ಟೇ. ಈ ಪ್ರಪಂಚದಲ್ಲಿ ಸುಖವೆಂಬುದಿಲ್ಲ, ಅದು ಅಶಾಶ್ವತ ಎಂದು ಕೃಷ್ಣನು "ಮಾಮುಪೇತ್ಯ ಪುನರ್ಜನ್ಮ ದುಃಖಾಲಯಂ ಅಶಾಶ್ವತಮ್". ಈ ಲೋಕಕ್ಕೆ ದುಃಖಾಲಯ ಮತ್ತು ಅಶಾಶ್ವತ ಎಂದು ಹೆಸರಿಟ್ಟಿದ್ದಾನೆ. ಕಿರಾಣಿ ಅಂಗಡಿಗೆ ಹೋಗಿ ಔಷಧಿಯನ್ನು ಕೇಳುವುದು ಎಷ್ಟು ತಪ್ಪೋ ಹಾಗೆ ದುಃಖಾಲಯ ಅಶಾಶ್ವತ ಎಂಬ ಲೋಕದಲ್ಲಿ ಸುಖವನ್ನು ಕೇಳುವುದು ಅಷ್ಟೇ ತಪ್ಪು!

ಇಂದ್ರಿಯಗಳು ಬಾಹ್ಯ ಪ್ರಪಂಚದ ವಸ್ತುಗಳನ್ನು ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮಗಳಿಂದ ರೂಪ, ಶಬ್ದ, ವಾಸನೆ, ರುಚಿ ಮತ್ತು ಸ್ಪರ್ಶಗಳನ್ನು ಅನುಕ್ರಮವಾಗಿ ಗ್ರಹಿಸಿ ಮನಸ್ಸಿಗೆ ರವಾನಿಸುತ್ತವೆ, ಮನಸ್ಸು ಆ ಮಾಹಿತಿಗಳನ್ನು ಸಂಸ್ಕರಣೆ ಮಾಡಬೇಕು ಎನ್ನುವ ಕಾಮನೆಯನ್ನು ವ್ಯಕ್ತಪಡಿಸುತ್ತದೆ. ಕಾಮನೆಯನ್ನು ದಕ್ಕಿಸಿಕೊಳ್ಳುವ ಪ್ರಯತ್ನವೇ ಕರ್ಮ. ಕರ್ಮದಿಂದ ಪಾಪಪುಣ್ಯಗಳು ಉಂಟಾಗುತ್ತವೆ. ಇದರಿಂದ ಕ್ಷಣಿಕವಾದ ಸುಖದುಃಖಗಳು, ನೋವುನಲಿವುಗಳು ಉಂಟಾಗುತ್ತವೆ.

ಶಂಕರಾಚಾರ್ಯರು ನಮಗೆಲ್ಲಾ.

**ಮನೋ ನಾಮ ಮಹಾವ್ಯಾಘ್ರೋ ವಿಷಯಾರಣ್ಯೇಷು ಭೂಮಿಷು।**
**ಚರತ್ಯತ್ರ ನ ಗಚ್ಛಂತು ಸಾಧಕೋ ನ ಮುಮುಕ್ಷವಃ॥ ವಿವೇಕ ಚೂಡಾಮಣಿ 176**

ಮನಸ್ಸು ಎಂಬ ಘೋರಹುಲಿ ವಿಷಯವೆಂಬ ಗೊಂಡಾರಣ್ಯದಲ್ಲಿ ಇದೆ. ಸಾಧಕರು ಮತ್ತು ಮೋಕ್ಷವನ್ನು ಬಯಸುವವರು ಅಲ್ಲಿಗೆ ಹೋಗಲು ಬಯಸುವುದಿಲ್ಲ.

ಶಂಕರಾಚಾರ್ಯರು ಎರಡು ಮಾರ್ಗಗಳನ್ನು ಶ್ರುತಿಯಲ್ಲಿ ಹೇಳಿರುವಂತೆ ತಿಳಿಸಿದ್ದಾರೆ. ಒಂದು ಕರ್ಮಕಾಂಡ ಮತ್ತೊಂದು ಜ್ಞಾನಕಾಂಡ. ಬ್ರಹ್ಮಚಾರಿಗಳು ಹಾಗೂ ಗೃಹಸ್ಥರು ಕರ್ಮಕಾಂಡವನ್ನು ಅನುಸರಿಸುವಂತೆ ಹೇಳಿದ್ದಾರೆ. ಅದರಲ್ಲೂ ಎರಡು ವಿಧಗಳು. ಕಾಮ್ಯಕರ್ಮ ಮತ್ತು ನಿಷ್ಕಾಮ ಕರ್ಮ. ಕಾಮ್ಯಕರ್ಮ ಅಂದರೆ ಯಾವುದೇ ಒಂದು ಕರ್ಮವನ್ನು ಫಲಾಪೇಕ್ಷೆಯಿಂದ ಮಾಡುವುದು. ಅದರಿಂದ ಸಿಕ್ಕಿದ ಫಲವನ್ನು ಅನುಭವಿಸಿದ ಮೇಲೆ ಪುನಃ ಸಂಸಾರ ಬಂಧನದಲ್ಲಿ ಸಿಲುಕುವುದು. ಸಂಸಾರ ಬಂಧನ ಎಂದರೆ "ಪುನರಪಿ ಜನನಂ ಪುನರಪಿ ಮರಣಂ" ಮೋಹ ಮುದ್ಗರದಲ್ಲಿ ಹೇಳುವ ಹಾಗೆ ಜನನ ಮರಣಗಳ ಚಕ್ರದಲ್ಲಿ ಸಿಲುಕಿ ಮತ್ತೆ ಸುಖದುಃಖಗಳಲ್ಲಿ ಸಿಲುಕಿ ನರಳುವುದು. ಇದನ್ನೇ ಭವಬಂಧನ ಎನ್ನುವರು.

ಕರ್ಮವನ್ನು ಮಾಡುವಾಗ ಯಾವುದೇ ಫಲಾಪೇಕ್ಷೆ ಇಲ್ಲದೇ ಮಾಡಿ ಫಲವನ್ನು ಭಗವದರ್ಪಣೆ

ಮಾಡುವುದು. ಇದರಿಂದ ಚಿತ್ತ ಶುದ್ಧಿಯಾಗಿ ವೈರಾಗ್ಯ ಮಾರ್ಗಕ್ಕೆ ಅನುವು ಮಾಡಿಕೊಡುವುದು. ಇದನ್ನು ನಿಷ್ಕಾಮಕರ್ಮ ಎನ್ನುವರು.

**ಚಿತ್ತಸ್ಯ ಶುದ್ಧಯೇ ಕರ್ಮ ನ ತು ವಸ್ತೂಪಲಬ್ಧಯೇ।**
**ವಸ್ತು ಸಿದ್ಧಿರ್ವಿಚಾರೇಣ ನ ಕಿಂಚಿತ್ ಕರ್ಮಕೋಟಿಭಿಃ॥ ವಿವೇಕ ಚೂಡಾಮಣಿ ॥**

ಒಂದು ರೀತಿಯಲ್ಲಿ ಜ್ಞಾನ ಮಾರ್ಗವು ಸುಗಮವಾಗುವುದು.

ಜ್ಞಾನಮಾರ್ಗದಲ್ಲಿ ಬ್ರಹ್ಮ, ಜೀವ ಮತ್ತು ಪ್ರಪಂಚದ ಸಂಬಂಧದ ರಹಸ್ಯವನ್ನು ತಿಳಿಸುತ್ತದೆ. ಜೀವಬ್ರಹ್ಮರ ಐಕ್ಯತೆ ಹಾಗೂ ಪ್ರಪಂಚವು ಮಿಥ್ಯೆ ಎಂದು ತಿಳಿಸುತ್ತದೆ. ಜ್ಞಾನಾದೇವ ತು ಕೈವಲ್ಯಂ. ಜ್ಞಾನದಿಂದಲೇ ಮೋಕ್ಷ. ಇನ್ನೊಂದು ವಾಕ್ಯವು ಅವಿದ್ಯಾಸ್ತಮಯೋ ಮೋಕ್ಷಃ. ಅವಿದ್ಯೆಯ ಅಸ್ತಮವೇ ಮೋಕ್ಷ. ಅವಿದ್ಯೆಯು ಜ್ಞಾನದಿಂದ ನಿವೃತ್ತಿಯಾಗುವುದು. ಎಲ್ಲರ ಪುರಾಣವ ನೀನರಿತೆನೆನ್ನುವೆ ನಿನ್ನ ಪುರಾಣವ ನೀನರಿಯೆ. ನಾನೆಂಬುದ ತಿಳಿಯಣ್ಣ, ಅದನರಿತರೆ ನೀನೇ ಮುಕ್ಕಣ್ಣ.

ಹೀಗೆ ಸತಾಂ ಸಂಗೋ ಹಿ ಭೇಷಜಂ ಎನ್ನುವ ಹಾಗೆ ಜ್ಞಾನಿಗಳ ಸಂಗವು ಶ್ರೇಯಸ್ಸಿಗೆ ಔಷಧಿ ಇರುವ ಹಾಗೆ ಇರುತ್ತದೆ. ಹೀಗೆ ಧರ್ಮಾಚರಣೆಯಣೆಯನ್ನು ಮಾಡಬೇಕು. ಕಡೆಯ ಪಕ್ಷ ನಿತ್ಯ ಕರ್ಮಗಳಾದ ಸಂಧ್ಯಾವಂದನೆ, ಬ್ರಹ್ಮಯಜ್ಞ ಔಪಾಸನಾ, ಅಗ್ನಿಹೋತ್ರ ಇತ್ಯಾದಿಗಳನ್ನು ಹಾಗೂ ನೈಮಿತ್ತಿಕ ಕಾರ್ಯಗಳು ಅಂದರೆ ಶ್ರಾದ್ಧಾ, ಸಂಕ್ರಮಣ, ಗ್ರಹಣ ಇತ್ಯಾದಿಗಳನ್ನು ಆಚರಿಸಬೇಕು.

**ಆಚಾರಹೀನಂ ನ ಪುನಂತಿ ವೇದಾಃ।**

ಆಚಾರವನ್ನು ಅನುಸರಿಸದೇ ಇರುವವನನ್ನು ವೇದಗಳು ಪವಿತ್ರಗೊಳಿಸುವುದಿಲ್ಲ! ಆದ್ದರಿಂದ ತ್ರಿಕಾಲ ಸಂಧ್ಯಾವಂದನೆಗಳನ್ನು ಮಾಡುವುದು ತನಗೇ ಶ್ರೇಯಸ್ಕರವು.

**ಸಂಧ್ಯಾಹೀನೋ ಅಶುಚಿರ್ನಿತ್ಯಂ ಸರ್ವಕರ್ಮ ಅನರ್ಹಸು।**

ಸಂಧ್ಯಾವಂದನೆಯನ್ನು ಮಾಡದಿರುವವನು ನಿತ್ಯ ಅಶುಚಿಯು ಮತ್ತು ಎಲ್ಲಾ ಕರ್ಮಗಳಿಗೂ ಅನರ್ಹನು.

**ಗಾಯಿತ್ರೀಂ ಪರಿತ್ಯಜ್ಯ ಯೋ ಅನ್ಯಮಂತ್ರಮುಪಾಸತೇ।**
**ಸಿದ್ಧಾನ್ನಂ ಪರಿತ್ಯಜ್ಯ ಭಿಕ್ಷಾಮಟತಿ ದುರ್ಮತಿಃ॥**

ಯಾರು ಗಾಯತ್ರಿಯನ್ನು (ಸಂಧ್ಯಾವಂದನೆಯನ್ನು) ಮಾಡದೇ ಬೇರೆ ಮಂತ್ರವನ್ನು ಹೇಳುತ್ತಾರೊ ಅವರು ಆಗತಾನೆ ಮಾಡಿದ ಅನ್ನವನ್ನು ತ್ಯಜಿಸಿ ಭಿಕ್ಷಾನ್ನವನ್ನು ಬಯಸಿ ತಿನ್ನುವ ಹಾಗೆ ಆಗುತ್ತದೆ,

ಹೇರಳವಾದ ಸಂಪತ್ತು, ಗರಿಷ್ಠ ವಿದ್ಯೆ, ಅತ್ಯುನ್ನತ ಪದವಿ, ಅಧಿಕಾರ, ಕೀರ್ತಿ, ಅನ್ಯೋನ್ಯತೆ ಇರುವ ಕುಟುಂಬ ಇತ್ಯಾದಿಗಳೆಲ್ಲವೂ ಇದ್ದರೂ ಸಹ ಧರ್ಮ ಮತ್ತು ಗುರುವಿನ ಸಂಶ್ರಯವಿಲ್ಲದಿದ್ದರೆ ಅವುಗಳಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಎಲ್ಲಾ ಲೌಕಿಕ ಸವಲತ್ತುಗಳು ಇದ್ದರೂ ಗುರುಗಳ ಪಾದದಲ್ಲಿ ಮನಸ್ಸನ್ನು ಇಡದಿದ್ದರೆ ಆ ಲೌಕಿಕ ವಸ್ತುಗಳಿಂದೇನು ಪ್ರಯೋಜನ? ಇದು ಕೆಳಗೆ ಶಂಕರ ಜಯಂತಿಯಂದು ಪಾರಾಯಣ ಮಾಡುವುದಕ್ಕೆ ಕೊಟ್ಟಿರುವ ಶಂಕರಾಚಾರ್ಯ ವಿರಚಿತ ಗುರ್ವಷ್ಟಕದ ಒಟ್ಟು ಸಾರಾಂಶ.

# ಗುರ್ವಷ್ಟಕ

ಶರೀರಂ ಸುರೂಪಂ ತಥಾ ವಾ ಕಲತ್ರಂ
ಯಶಶ್ಚಾರು ಚಿತ್ರಂ ಧನಂ ಮೇರು ತುಲ್ಯಮ್ ।
ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ
ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥ 1 ॥

ಕಲತ್ರಂ ಧನಂ ಪುತ್ರ ಪೌತ್ರಾದಿಸರ್ವಂ
ಗೃಹಂ ಬಾಂಧವಾಃ ಸರ್ವಮೇತದ್ಧಿ ಜಾತಮ್ ।
ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ
ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥ 2 ॥

ಷಡಂಗಾದಿವೇದೋ ಮುಖೇ ಶಾಸ್ತ್ರವಿದ್ಯಾ
ಕವಿತ್ವಾದಿ ಗದ್ಯಂ ಸುಪದ್ಯಂ ಕರೋತಿ ।
ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ
ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥ 3 ॥

ವಿದೇಶೇಷು ಮಾನ್ಯಃ ಸ್ವದೇಶೇಷು ಧನ್ಯಃ
ಸದಾಚಾರವೃತ್ತೇಷು ಮತ್ತೋ ನ ಚಾನ್ಯಃ ।
ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ
ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥ 4 ॥

ಕ್ಷಮಾಮಂಡಲೇ ಭೂಪಭೂಪಾಲವೃಂದೈಃ
ಸದಾ ಸೇವಿತಂ ಯಸ್ಯ ಪಾದಾರವಿಂದಮ್ ।
ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ
ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥ 5 ॥

ಯಶೋ ಮೇ ಗತಂ ದಿಕ್ಷು ದಾನಪ್ರತಾಪಾತ್
ಜಗದ್ವಸ್ತು ಸರ್ವಂ ಕರೇ ಯತ್ಪ್ರಸಾದಾತ್ ।
ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ
ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥ 6 ॥

ನ ಭೋಗೇ ನ ಯೋಗೇ ನ ವಾ ವಾಜಿರಾಜೌ
ನ ಕಾಂತಾಮುಖೇ ನೈವ ವಿತ್ತೇಷು ಚಿತ್ತಮ್ ।
ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ
ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥ 7 ॥

ಅರಣ್ಯೇ ನ ವಾ ಸ್ವಸ್ಯ ಗೇಹೇ ನ ಕಾರ್ಯೇ
ನ ದೇಹೇ ಮನೋ ವರ್ತತೇ ಮೇ ತ್ವನರ್ಘ್ಯೇ
ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ
ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥ 8 ॥

ಗುರೋರಷ್ಟಕಂ ಯಃ ಪಠೇತ್ಪುಣ್ಯದೇಹಿ।
ಯತಿರ್ಭೂಪತಿರ್ಬ್ರಹ್ಮಚಾರೀ ಚ ಗೇಹೀ ।
ಲಭೇದ್ವಾಂಛಿತಾರ್ಥಪದಂ ಬ್ರಹ್ಮಸಂಜ್ಞಂ
ಗುರೋರುಕ್ತವಾಕ್ಯೇ ಮನೋ ಯಸ್ಯ ಲಗ್ನಮ್ ॥ 9 ॥

# ಇದು ವಾರಣಾಸಿ– ಬನ್ನಿ ಮೋಕ್ಷದಾರಿಗಳ ಅರಸಿ!

– ತುರುವೇಕೆರೆ ಪ್ರಸಾದ್



ಮಗಳು ಶರಧಿ, ಅಳಿಯ ಶಶಿಕಾಂತ್ ಮತ್ತು ಬೀಗರೊಂದಿಗೆ ವಾರಣಾಸಿ ಮತ್ತು ಅಯೋಧ್ಯೆಗೆ ಭೇಟಿ ನೀಡುವ ಅಪೂರ್ವ ಅವಕಾಶವೊಂದು ಅನಿರೀಕ್ಷಿತವಾಗಿ ಒದಗಿ ಬಂದಿತ್ತು. ಇದ್ದ ಬದ್ದ ಕೆಲಸಗಳನ್ನೆಲ್ಲಾ ಬದಿಗೊತ್ತಿ ಮೊದಲ ಬಾರಿಗೆ ವಿಮಾನ ಏರಿಯೇ ಬಿಟ್ಟೆ. ವಾರಣಾಸಿ ನೋಡಿದಾಗ ಮೂಕ ವಿಸ್ಮಿತನಾದೆ. ಅದೊಂದು ಅಪೂರ್ವ ಅನುಭವ! ಕಾಶಿ ಭಾರತದ ಅಧ್ಯಾತ್ಮದ, ಹಿಂದೂ ಸಂಸ್ಕೃತಿಯ ಆತ್ಮ, ಅಲ್ಲೊಂದು ದಿವ್ಯ ಸಂಚಲನವಿದೆ. ಪುಟಿದೆದ್ದು ಚಿಮ್ಮುವ ಭಕ್ತಿ ಭಾವದ ಚಿಲುಮೆಯಿದೆ. ಇಡೀ ನಗರ ಪ್ರತಿಕ್ಷಣ ಸಂಭ್ರಮ ಸಡಗರದಿಂದ ನಲಿಯುತ್ತದೆ. ಇಡೀ ಕಾಶಿಯೇ ವಿಶ್ವನಾಥನನ್ನು ಆವಾಹಿಸಿಕೊಂಡಂತೆ ದಿವ್ಯ ಕಂಪನಗಳನ್ನು ಮೈದುಂಬಿಕೊಂಡು ವಿಜೃಂಬಿಸುತ್ತಾ ಕಣ್ಮುಂದೆ ಸರಿದುಹೋಗುತ್ತದೆ. ಬೆಳಗಿನ ಜಾವ 2 ಗಂಟೆಯಿಂದ ರಾತ್ರಿ 10ರವರೆಗೆ ಜನ ವಿಶ್ವನಾಥದನ ದರ್ಶನಕ್ಕೆ ಕಾದು ನಿಂತಿರುತ್ತಾರೆ. ಮೊದಲೇ ಆನ್ಲೈನ್ನಲ್ಲಿ ಆರತಿಗೆ ಟಿಕೆಟ್ ಬುಕ್ ಮಾಡಿಸಿದ್ದರೆ ವಿಶ್ವನಾಥನ ದರ್ಶನ ಒಂದು ಗಂಟೆಯಲ್ಲಿ ಆಗಬಹುದು. ಇಲ್ಲವಾದರೆ ಮಾಮೂಲಿ ಸರತಿಯ ಸಾಲಿನಲ್ಲಿ 3–4 ಗಂಟೆಗಳು ಕಾದು ದರ್ಶನ ಪಡೆಯಬೇಕು. ಇಲ್ಲಿನ ಬಹುತೇಕ ದೇವಾಲಯಗಳಲ್ಲಿ ದೇವರನ್ನು ಮುಟ್ಟಬಹುದು. ಕಾಶಿವಿಶ್ವನಾಥನ ದೇವಾಲಯದಲ್ಲೂ ಜ್ಯೋತಿರ್ಲಿಂಗವನ್ನು ಸ್ಪರ್ಶಿಸಿ ದಿವ್ಯ ಅನುಭವ ಪಡೆಯಬಹುದು. ಹಾಗಾಗಿ ದೇವರು, ಭಕ್ತರ ನಡುವೆ ಅಸ್ಪೃಶ್ಯತೆ ಇಲ್ಲದ ಸಮರ್ಪಣೆಯ ಆಪ್ತತೆಯಿದೆ. ಪಕ್ಕದಲ್ಲಿ ನಿಂತ ಎಲ್ಲಾ ಜಾತಿಯವರ ಒಡನಾಟ, ಮುಂದೆ ನಿಂತ ಎಲ್ಲಾ ಪಂಥದವರ, , ಹಿಂದೆ ನಿಂತ ಎಲ್ಲಾ ಪ್ರಾಂತದವರ ಉಸಿರಲ್ಲಿ ಉಸಿರಾಗಿ ಬೆರೆತು ನಮ್ಮವರೆಂಬ ಸಮಷ್ಠಿ ಹಿತದ ಸಮಾನತೆಯ ಭಾವನೆ ಮೂಡುತ್ತದೆ. ಅದೇ ಹಿಂದೂ ಧರ್ಮದ ಮೂಲ ತತ್ವವಾದ್ದರಿಂದ ಇಂತಹ ಭಾವನೆ ಮೂಡಿಸುವ ಕರ್ಮಭೂಮಿ, ಪುಣ್ಯಭೂಮಿ ಕಾಶಿ ಎನಿಸಿಬಿಡುತ್ತದೆ. ಅಯಸ್ಕಾಂತಗಳ ಸಾಮೀಪ್ಯದಿಂದ ಕಬ್ಬಿಣದ ತುಂಡೂ ಸೆಳೆಯುವ ಶಕ್ತಿ ಪಡೆವಂತೆ, ಅಷ್ಟೆಲ್ಲ ಲಕ್ಷ ಲಕ್ಷ ಧನಾತ್ಮಕ ಕಂಪನಗಳನ್ನು ಮೂಡಿಸುವ ಭಕ್ತ ಸಮೂಹದ ನಡುವೆ ನಮ್ಮ ಋಣಾತ್ಮಕ ಕಂಪನಗಳು ನಿಗ್ರಹಿಸಲ್ಪಟ್ಟು ನಮ್ಮಲ್ಲೂ ಧನಾತ್ಮಕ ಕಂಪನಗಳು ಆರಂಭವಾದ ಅನುಭವವಾಗುತ್ತದೆ. ಇದೆಲ್ಲಾ ನಮ್ಮದು, ಜನ್ಮಜನ್ಮಾಂತರದ ಅಂಟಿನ ನಂಟಿದು, ಇದು ಹೀಗೇ ಪವಿತ್ರವಾಗಿರಬೇಕು, ಈ ದಿವ್ಯಾನಂದ ನಿರಂತರವಾಗಿರಬೇಕು, ಮುಂದಿನ ಪೀಳಿಗೆಗೂ ದಕ್ಕಬೇಕು ಎನಿಸಿ ಇದರ ರಕ್ಷಣೆಯ ಜವಾಬ್ಧಾರಿಯೂ ಪ್ರತಿಯೊಬ್ಬನ ಧರ್ಮ, ಆದ್ಯ ಕರ್ತವ್ಯ ಎಂಬ ಜ್ಞಾನ ಎಲ್ಲರಲ್ಲೂ ವ್ಯಾಪಿಸಬೇಕಿದೆ. ಇದೆಲ್ಲಾ ಆಗಬೇಕೆಂದರೆ ಕಣ್ಣಿನ ಜೊತೆಗೆ ಮನಸ್ಸನ್ನೂ ತೆರೆದಿಟ್ಟುಕೊಳ್ಳಬೇಕು, ಅದೂ ಜಾಗೃತ ಸ್ಥಿತಿಯಲ್ಲಿ!ಹಾಗಾದಾಗ ಕಾಶಿಯಾತ್ರೆ, ವಿಶ್ವನಾಥನ ದರ್ಶನ ಎರಡೂ ಧನ್ಯ, ಪಾವನ! ಹರ್ ಹರ್ ಮಹಾದೇವ್!

ಕಾಶಿಯ ಗಲ್ಲಿ ಗಲ್ಲಿಯಲ್ಲೂ ದೇವಸ್ಥಾನಗಳಿವೆ. ಸುಮಾರು 42 ವೈಶಿಷ್ಟಪೂರ್ಣ ಶಿವಲಿಂಗಗಳಿವೆ. ಹಲವಾರು ದೇವಸ್ಥಾನಗಳಲ್ಲಿ ನೀವೇ ಸ್ವತಃ ದೇವರನ್ನು (ಲಿಂಗವನ್ನು) ಅಥವಾ ದೇವರ ಪಾದವನ್ನು ಸ್ಪರ್ಶಿಸಿ ದಿವ್ಯ ಧನ್ಯತೆಯನ್ನು ಅನುಭವಿಸಬಹುದು. ಬಹುತೇಕ ದೇವಸ್ಥಾನದ ಮುಂಭಾಗ ಸರತಿ ಸಾಲಿನುದ್ದಕ್ಕೂ ಹಣೆಗೆ ವಿಭೂತಿ, ಭಸ್ಮ, ಗಂಧದ ಲೇಪನ ಮಾಡಿ ಮಧ್ಯೆ ಲಿಂಗ, ಶಿವಪಾರ್ವತಿಯ ಅಚ್ಚು ಹಾಕುವ ಬೈರಾಗಿಗಳು, ಸಂತರು, ಇದನ್ನೇ ದುಡ್ಡು ಕೀಳುವ ಕಸುಬು ಮಾಡಿಕೊಂಡ ಗಂಧಹಚ್ಚೋ ಮಂದಿ ಇರುತ್ತಾರೆ. ಕಾಶಿ ವಿಶ್ವನಾಥನ ಸನ್ನಿಧಿಯಲ್ಲಂತೂ ಹೆಂಗಸರು, ಗಂಡಸರು ಮಕ್ಕಳಾದಿಯಾಗಿ ಯಾರ ಹಣೆ ನೋಡಿದರೂ ಗಂಧದ ಲೇಪನವೇ! ಢಾಳಾಗಿ ಅಡ್ಡಡ್ಡ ಇಟ್ಟ ಎರಡು ಮೂರು ಬೆರಳೆಳೆ ಗಂಧದ ಮೇಲೆ ಶಿವಲಿಂಗ, ಶಿವಪಾರ್ವತಿಯರ ಕೆಂಪುಬಣ್ಣದ ಅಚ್ಚು ಎದ್ದು ಕಾಣುತ್ತದೆ. ಆ ಒಂದು ತಿಲಕದ ಧಾರಣೆಯೇ ಪುರುಷರಿಗೆ ಮತ್ತು ಸ್ತ್ರೀಯರಿಗೆ ಒಂದು ವಿಶಿಷ್ಟ ದೈವೀರೂಪವನ್ನು, ದಿವ್ಯ ಕಳೆಯನ್ನು ತುಂಬಿ ಬಿಡುತ್ತದೆ.

# ಗಂಗಾರತಿ



ಕಾಶಿಗೆ ಹೋದವರೆಲ್ಲಾ ಶ್ರೀ ವಿಶ್ವನಾಥನ ದರ್ಶನದ ನಂತರ ಗಂಗಾರತಿ ನೋಡಿಯೇ ಧನ್ಯರಾಗಿರುತ್ತಾರೆ. ಅದಿಲ್ಲದಿರೆ ಕಾಶಿ ಭೇಟಿಯೇ ಅಪೂರ್ಣವೆನಿಸಿಬಿಡುತ್ತದೆ. ದಶಾಶ್ವಮೇಧ ಘಾಟಿಯಲ್ಲಿ ಪ್ರತಿದಿನ ಸಂಜೆ 6–30 ರಿಂದ 7–30ರವರೆಗೆ ನಡೆಯುವ ಈ ಗಂಗಾರತಿ ನಯವ ಮನೋಹರವಾದದ್ದು. ನದಿಗೆ ಇಳಿದೊಡನೇ ಇಡೀ ದಿನದ ಆಯಾಸ ಮರೆಯಾಗುತ್ತದೆ. ತಂಪಾದ ಗಾಳಿ ಮೈ ಮನಗಳ ತಾಪಗಳನ್ನೆಲ್ಲಾ ಕ್ಷಣ ಮಾತ್ರದಲ್ಲಿ ಇಲ್ಲವಾಗಿಸಿ ಪ್ರಶಾಂತ, ಧ್ಯಾನಸ್ಥ ಮನಸ್ಥಿತಿಗೆ ಆಹ್ವಾನಿಸುತ್ತದೆ. ತಲೆ ಎತ್ತಿನೋಡಿದರೆ ಕೊನೆ ಮೊದಲಿಲ್ಲದ ಆಕಾಶ, ತಲೆ ತಗ್ಗಿಸಿದರೆ ನಿರಾಳವಾಗಿ ಹರಿಯುವ ಗಂಗೆ. ಒಂದೆಡೆ ಆಕಾಶ ಗೋಧೂಳಿಯಿಂದ ಕೆಂಪಾಗಿ ತನ್ನ ಪ್ರಭೆಯನ್ನು ಹರಡುತ್ತಿದ್ದಂತೆ ಗಂಗಾರತಿ ಅದಕ್ಕೆ ಚಿನ್ನದ ಲೇಪವಿಟ್ಟಂತೆ ಪ್ರಜ್ವಲಿಸುತ್ತದೆ. ಗಂಗಾರತಿ ಶುರುವಾಗುತ್ತಿದ್ದಂತೆ ಸಾವಿರಾರು ಜನರು ಮಂತ್ರಮುಗ್ಧರಾಗಿ ನಿಲ್ಲುತ್ತಾರೆ. ಗಂಗಾನದಿಯಲ್ಲಿ ದೋಣಿಯಲ್ಲಿ ನಿಂತು ಈ ದೃಶ್ಯವನ್ನು ಕಣ್ತುಂಬಿಕೊಳ್ಳುವುದೇ ಒಂದು ಸೌಭಾಗ್ಯ.ಮೇಲೆ ಕೆಳಗೆ ಇಳಿವ ದೀಪಮಾಲೆಗಳಂತೆ ದೋಣಿಯೂ ಅತ್ತಿತ್ತ ತೂಗಾಡುತ್ತಿರುವಾಗ ಸಾವಿರ ಕಣ್ಣಿನ ಪ್ರತಿಬಿಂಬಗಳು ಗಂಗೆಗೆ ಆರತಿ ಎತ್ತಿದಂತೆ ಕಾಣುತ್ತದೆ. ಪಾಪ ತೊಳೆದುಕೊಂಡು ಪರಿಶುದ್ಧವಾಗಿ ಅವಳ ಒಡಲಲ್ಲಿ ನಿಂತವರಿಗೆ ಗಂಗೆಯೇ ವಾಪಸ್ ಆರತಿ ಎತ್ತಿ ಹೊಸ ಬದುಕಿಗೆ ಆಶೀರ್ವದಿಸಿದಂತೆ ಭಾಸವಾಗುತ್ತದೆ. ಅದೊಂದು ಅನಿರ್ವಚನೀಯ ದಿವ್ಯ ಅನುಭವ. ಈ ಗಂಗಾರತಿ ಇಡೀ ಭೂಮಂಡಲದ ವಾರಿಧಿಯ ಸ್ವರೂಪವಾದ, ಪ್ರಾಣ ಸ್ವರೂಪಿಣಿ, ಪಾಪ ನಿವಾರಕಿ ಗಂಗೋತ್ರಿಯ ಪುತ್ರಿ ದೇವನದಿಗೆ ಕೃತಜ್ಞತೆಯಿಂದ ಎತ್ತಿದ ಆರತಿಯಂತೆ ಕಾಣುತ್ತದೆ. ರುದ್ರ ರಮಣೀಯ ನೈಸರ್ಗಿಕ ಸೌಂದರ್ಯ, ಧಾರ್ಮಿಕ ಪಾವಿತ್ರ್ಯತೆ, ಸಾಂಸ್ಕೃತಿಕ ಸೌರಭದ ಸಂಗಮದಲ್ಲಿ ನಿಂತು ನಮಗೆ ನಾವೇ ಆರತಿ ಎತ್ತಿಸಿಕೊಂಡ ಅನುಭವವಾಗುತ್ತದೆ.

ಗಂಗಾರತಿ ನೋಡುವವರು ಸಂಜೆ 5 ಗಂಟೆಯಿಂದಲೇ ದಶಾಶ್ವಮೇಧ ಘಾಟ್ ಮುಂಭಾಗ ದೋಣಿಯಲ್ಲಿ ನೆರೆಯುತ್ತಾರೆ. ಅಲ್ಲಿ ಸುಮಾರು ಒಂದೂವರೆ ಗಂಟೆ ಕಾಯಬೇಕು. ದೋಣಿಯಲ್ಲಿ ಅಷ್ಟೊಂದು ಸಮಯ ಒಂದೇ ಜಾಗದಲ್ಲಿ ನಿಂತಿರುವುದು ಸ್ವಲ್ಪ ಕಷ್ಟದ ಕೆಲಸವೇ! ಸ್ವಲ್ಪ ಹಿಂದಿನಿಂದ ನೋಡಿದರೂ ಪರವಾಗಿಲ್ಲ ಎನ್ನುವುದಾದರೆ ಸಂಜೆ 6ರ ವೇಳೆಗೆ ನದಿಗೆ ಇಳಿಯಬಹುದು. ಪಕ್ಕ ಪಕ್ಕ ಎರಡು ಪ್ರತ್ಯೇಕ ಸ್ಥಳಗಳಲ್ಲಿ ಗಂಗಾರತಿ ನಡೆಯುತ್ತದೆ. ಮೊದಲೇ ಹೋಗಿ ನಿಂತು ಕಾದರೆ ತುಂಬಾ ಹತ್ತಿರದಿಂದ ಗಂಗಾರತಿ ವೀಕ್ಷಿಸಬಹುದು. ಸ್ವಲ್ಪ ಹೆಚ್ಚು ದುಡ್ಡು ಕೊಟ್ಟರೆ ದೊಡ್ಡ ಲಾಂಜ್‌ಗಳಲ್ಲಿ ಎತ್ತರದಿಂದ ಗಂಗಾರತಿ ವೀಕ್ಷಿಸಬಹುದು. ಹಾಗೇ ನೀವೂ ಗಂಗೆಯಲ್ಲಿ ನಿಮ್ಮ ಸಂಕಲ್ಪದ ದೀಪ ತೇಲಿಬಿಡಬಹುದು (ಇದು ಮಾಲಿನ್ಯಕಾರಕವಾದ್ದರಿಂದ ಹಾಗೆ ಮಾಡದಿರುವುದೇ ಒಳ್ಳೆಯದು). ನಾವು 5 ಜನರು ಒಂದು ಬೋಟನ್ನು ಗೊತ್ತು ಮಾಡಿಕೊಂಡಿದ್ದೆವು. ಗಂಗಾರತಿಯ ನಂತರ ಸುಮಾರು 5–6 ಕಿಲೋಮೀಟರ್ ಗಂಗಾನದಿಯಲ್ಲಿ ಕೊರೆವ ಚಳಿಯಲ್ಲಿ ಪಯಣಿಸಿದೆವು. ಸಾಲು ಸಾಲಾಗಿ ಸಿಗುವ ತುಳಸಿಘಾಟ್,ಅಸ್ಸಿ ಘಾಟ್, ಕೇದಾರ ಘಾಟ್, ರಾಜಘಾಟ್, ಮೊದಲಾದ ಘಾಟುಗಳಲ್ಲಿ ಅದ್ಭುತವಾಗಿ ಅಲಂಕರಿಸಿದ ದೀಪ ಗುಚ್ಛಗಳು ಕಣ್ಮನ ಸೂರೆಗೊಂಡು ಮನಸ್ಸು ಆನಂದಮಯವಾಯಿತು.



ಹಿಂದೆಯೇ ಮಣಿಕರ್ಣಿಕಾ, ಹರಿಶ್ಚಂದ್ರ ಘಾಟ್ಗಳಲ್ಲಿ ಉರಿಯುತ್ತಿದ್ದ ಕಳೇಬರಗಳು ಬದುಕಿನ ನಶ್ವರತೆಯನ್ನು ಸಾರಿ ಹೇಳಿದಂತಿತ್ತು. ಮನಸ್ಸು ದುಗುಡದ ಕುಲುಮೆಯಾಯಿತು. ಅವು ಹಿಂದೆ ಸರಿದ ಬೆನ್ನಿಗೇ ಮತ್ತೆ ದೋಣಿಗಳು ಅಕ್ಕ ಪಕ್ಕ ನಮ್ಮನ್ನು ದಾಟಿ ಜೀವಂತಿಕೆಯ ಕಡಲಲ್ಲಿ ತೇಲಿ ಹೋಗುವುದನ್ನು ಕಂಡಾಗ ಮನಸ್ಸು ಉತ್ಸಾಹದ ಚಿಲುಮೆಯಾಗಿ ಪುಟಿಯಿತು. ಬೇಂದ್ರೆಯವರು ಗಂಗಾವತರಣದಲ್ಲಿ ಹೇಳುವಂತೆ 'ಹರಕೆ ಸಂದಂತೆ,ಮಮತೆ ಮಿಂದಂತೆ, ತುಂಬಿ ಬಂದಂತೆ ದುಮ್ ದುಮ್ ಎಂದಂತೆ ಮನಸ್ಸು, ಹೃದಯದಲ್ಲೂ ಗಂಗಾವತರಣವಾಯಿತು. ಶ್ರೀ ಗಂಗಾಮಾತೆ ಸದಾ ಹೀಗೇ ಸಮಚಿತ್ತಳಾಗಿ ಪ್ರವಹಿಸಲಿ, ಪಾಪವೇ ಮಾಡದಂತೆ ಕಾಯಲಿ, ಜನುಮಜನುಮಗಳ ಸಂಚಿತ ಪುಣ್ಯವನ್ನು ಅವಳೊಡಲಿಗೆ ಕೊಟ್ಟು ಪಾಪ ತೊಳೆದ ಅವಳ ಋಣ ತೀರಿಸುವ ಸೌಭಾಗ್ಯ ಪದೇ ಪದೇ ಬರಲಿ, ಇಡೀ ಜೀವಕೋಟಿಯನ್ನು ಸಮೃದ್ಧಿಯಿಂದ ಹರಸಲಿ ಎಂದು ಪ್ರಾರ್ಥಿಸಿ ತಲೆ ಮೇಲೆ ಗಂಗಾಜಲ ಪ್ರೋಕ್ಷಣೆ ಮಾಡಿಕೊಂಡೆವು. ಹರಿಪದಪಾದ್ಯತರಂಗಿಣಿ ಗಂಗೇ ಹಿಮವಿಧುಮುಕ್ತಾಧವಳತರಂಗೇ! ದೂರೀಕುರು ಮಮ ದುಷ್ಕೃತಿಭಾರಂ ಕುರು ಕೃಪಯಾ ಭವಸಾಗರಪಾರಂ!

ವಾರಣಾಸಿಯಲ್ಲಿ ಬಹುತೇಕ ಚಿಕ್ಕ ಪುಟ್ಟ ದೇವಾಲಯಗಳು ಸಣ್ಣ ಸಣ್ಣ ಗಲ್ಲಿಗಳಲ್ಲೇ ಇವೆ. ಈ ಗಲ್ಲಿಗಳಿಗೆ ಹೊಂದಿಕೊಂಡಂತೆಯೇ ಸೀರೆ ಅಂಗಡಿಗಳು, ಹೂವು, ಸಿಹಿ ಅಂಗಡಿಗಳು, ಮೆಕ್ಯಾನಿಕ್ ಶಾಪುಗಳು ಇವೆ. ಇಂತಹ ಗಲ್ಲಿಗಳಲ್ಲೂ ಎರಡೂ ಬದಿಯಿಂದ ದ್ವಿಚಕ್ರವಾಹನ ಸವಾರರು ಕಿರ್ರೆಂದು ಹಾರನ್ ಮಾಡುತ್ತಾ ನುಗ್ಗಿ ಬಿಡುತ್ತಾರೆ. ನಾವು ಹಲ್ಲಿಗಳಂತೆ ಗೋಡೆಗೆ ಅಂಟಿಕೊಂಡೇ ಅವರಿಗೆ ಜಾಗ ಬಿಡಬೇಕು.ಶ್ರೀ ಕಾಲಭೈರವೇಶ್ವರ, ವಿಶಾಲಾಕ್ಷಿ, ಶ್ರೀ ಅನ್ನಪೂರ್ಣ, ಶ್ರೀ ಭೀಮಾಶಂಕರ ಈ ಎಲ್ಲಾ ದೇವಾಲಯಗಳ ಕತೆಯೂ ಇಷ್ಟೇ. ಈ ದೇವಾಲಯಗಳ ಒಳಗೆ ಹೋಗಿ ದರ್ಶನ ಪಡೆಯಲು ಹರಸಾಹಸ ಮಾಡಬೇಕು.

ಕಾಶಿಗೆ ಹೋದವರು ಶ್ರೀ ಕಾಶಿ ವಿಶ್ವನಾಥನ ದರ್ಶನದ ಜೊತೆಗೆ ಶ್ರೀ ಕಾಲಭೈರವೇಶ್ವರಸ್ವಾಮಿ ದರ್ಶನ ಮಾಡಲೇಬೇಕು ಎನ್ನುವ ಪ್ರತೀತಿ ಇದೆ. ಕಾಲಭೈರವನನ್ನು ಕಾಶಿಯ ಕೊತ್ವಾಲ್ ( ರಕ್ಷಕ,ಪರಮೋಚ್ಚ ದೇವರು) ಎಂದು ಕರೆಯುತ್ತಾರೆ, ಅದರಂತೆ ನಾವು ಶ್ರೀ ಕಾಲಭೈರವೇಶ್ವರನ ದರ್ಶನಕ್ಕೆ ಹೋದೆವು. ಇಲ್ಲಂತೂ ತೀರಾ ಕಿರಿದಾದ ಗಲ್ಲಿಯ ಮೂಲಕ ಹಾದು ಹೋಗಬೇಕು. ತೀರಾ ನೂಕುನುಗ್ಗಲು ಇರುತ್ತದೆ. ಈ ಕಿಕ್ಕಿರಿದ ಜನಗಳ ಮಧ್ಯೆಯೂ ದ್ವಿಚಕ್ರ ವಾಹನ ಸವಾರರು ಜನಗಳ ಪರಿವೆ, ಪ್ರಜ್ಞೆ ಏನೂ ಇಲ್ಲದೆ ನುಗ್ಗಿಕೊಂಡು ಹೋಗುತ್ತಾರೆ. ಗೋಡೆ ಬದಿಗೆ ಸಾಲಿನಲ್ಲಿ ಹೋಗುವವರು ತುಂಬಾ ಎಚ್ಚರದಿಂದಿರಬೇಕು. ಮೊಣಕಾಲಿನ ಎತ್ತರದಲ್ಲಿ ಗೋಡೆಯಿಂದ ಹೊರಬಂದ ಚಾಚು ಕಲ್ಲುಗಳಿದ್ದು ಅವು ಕಾಲಿಗೆ ಹೊಡೆದರೆ ತೀವ್ರ ತರವಾದ ಗಾಯವಾಗುತ್ತದೆ. ಮೂಲಮೂರ್ತಿಯನ್ನು ಮುಟ್ಟುವಂತಿಲ್ಲ, ದೂರದಿಂದಲೇ ದರ್ಶನ ಮಾಡಬೇಕು. ಪ್ರತಿಮೆಗೆ ಬೆಳ್ಳಿ ಮುಖವಾಡವಿದೆ. ಪ್ರತಿಮೆಯನ್ನು ಕಾಲಭೈರವನ ವಾಹನ ಶ್ವಾನ ಮತ್ತು ತ್ರಿಶೂಲದೊಂದಿಗೆ ಕೆತ್ತಿದೆ ಎಂದು ಹೇಳುತ್ತಾರಾದರೂ ಇಡೀ ವಿಗ್ರಹ ಸದಾ ಪೂರ್ಣ ಪ್ರಮಾಣದಲ್ಲಿ ಹೂವಿನಿಂದ ಮುಚ್ಚಿರುವುದರಿಂದ ಅದು ಹೊರಗೆ ಗೋಚರಿಸುವುದಿಲ್ಲ. ಆದರೆ ಹಿಂಬದಿಯಲ್ಲಿರುವ ಕಾಲಭೈರವನ ಮಂಟಪದಲ್ಲಿ ಪ್ರಾಜ್ವಲ್ಯಮಾನವಾಗಿ ಉರಿಯುತ್ತಿರುವ ದೀಪವೊಂದಿದೆ. ಇದು ಎಂದೂ ಆರದ ದೀಪ ಎಂದು ಹೇಳುತ್ತಾರೆ. ಈ ದೀಪಕ್ಕೆ ನೀವು ಎಳ್ಳೆಣ್ಣೆ ಹಾಕಿ ಪೂಜಿಸಿ ಈ ದೀಪದ ಬುಡದ ರಕ್ಷೆ ಹಚ್ಚಿಕೊಂಡರೆ ಶ್ರೇಯಸ್ಕರ ಎಂದು ಹೇಳುತ್ತಾರೆ. ಹಲವರು ಭೈರವನಿಗೆ ಮದ್ಯವನ್ನೂ ಸಹ ಸಮರ್ಪಿಸುತ್ತಾರೆ.



ಕಾಶಿಯ ತುಂಬಾ ಕಾಲಿಟ್ಟೆಡೆಯೆಲ್ಲಾ ಒಂದಲ್ಲ ಒಂದು ದೇವಸ್ಥಾನ ಸಿಗುತ್ತದೆ. ಮುಖ್ಯವಾಗಿ 42 ವಿಶಿಷ್ಟ ಲಿಂಗಗಳಿವೆ ಎಂದು ಹೇಳುತ್ತಾರೆ. ಎಲ್ಲವನ್ನೂ ಸಂದರ್ಶಿಸುವುದು ತುಂಬಾ ಕಷ್ಟದ ಕೆಲಸ.ಕೆಲವು ಮಹತ್ತರವಾದ ಐತಿಹಾಸಿಕ ಹಾಗೂ ಪೌರಾಣಿಕ ಇತಿಹಾಸ ಹೊಂದಿದ ಶಿವಲಿಂಗಗಳ ದರ್ಶನ ಮಾಡಬಹುದು. ಅವುಗಳಲ್ಲಿ ಮುಖ್ಯವಾದುದು



ಕೃಷ್ಣೇಶ್ವರದ ಮಹಾದೇವ ಲಿಂಗ. ಇದನ್ನು ಶ್ರೀ ಕೃಷ್ಣ ಪರಮಾತ್ಮ ಪತ್ನಿ ಜಾಂಬವತಿಯೊಡನೆ ಬಂದು ಸ್ಥಾಪಿಸಿದ ಎಂಬ ಉಲ್ಲೇಖವಿದೆ. ಇನ್ನೊಂದು ಆತ್ಮ ವಿಶ್ವೇಶ್ವರ್ ಮಹಾದೇವ. ಈತನ ವರದಿಂದಲೇ ಸ್ವಾಮಿ ವಿವೇಕಾನಂದರು ಹುಟ್ಟಿದ್ದು ಎಂಬ ಪ್ರತೀತಿಯಿದೆ. ಇವೆರಡು ಬಿಟ್ಟರೆ ಸಿದ್ದೇಶ್ವರಿ ಮಾತಾ ಮಂದಿರಕ್ಕೆ ಭೇಟಿ ನೀಡಬಹುದು. ಈಕೆ ನವದುರ್ಗೆಯರಲ್ಲಿ ಕೊನೆಯವಳು (ಒಂಭತ್ತನೆಯವಳು) ಎಂಬ ಪ್ರತೀತಿ ಇದೆ. ಇಲ್ಲಿ ಚಂದ್ರಶ್ವರ ಶಿವಲಿಂಗವಿದೆ. ಈ ದೇವಾಲಯದ ಹೊರಗೆ ಒಂದು ಬಾವಿ ಇದೆಯಂತೆ. ಅಲ್ಲಿ ಬಾಗಿ ಮುಖ ನೋಡಿಕೊಂಡಾಗ ನೀರಿನಲ್ಲಿ ನಿಮ್ಮ ಬಿಂಬ ಕಾಣಲೇಬೇಕಂತೆ. ಇಲ್ಲವಾದಲ್ಲಿ ನೀವು 6 ತಿಂಗಳಲ್ಲಿ ಕಾಶಿ ವಿಶ್ವನಾಥನ ಪಾದ ಸೇರುತ್ತೀರಿ ಎಂಬ ಪ್ರತೀತಿ ಇದೆ. ನಾವು ಇಲ್ಲಿಗೆ ಬೇಟಿ ನೀಡಲಿಲ್ಲ.

ಕಾಶಿಯ ತುಂಬಾ ಇರುವುದು ಬಹುತೇಕ ಶಿವಲಿಂಗಗಳೇ! ಅಥವಾ ಪಾರ್ವತಿ ಸ್ವರೂಪಿಣಿಯಾದ ಶಕ್ತಿದೇವಿಯರೇ!ಆದರೆ ಇಲ್ಲೂ ವಿಷ್ಣು ದೇವಾಲಯಗಳಿವೆ ಎಂಬುದು ಬಹುತೇಕರಿಗೆ ತಿಳಿದಿಲ್ಲ.



ಬಿಂದು ಮಾಧವ ದೇವಾಲಯ ಮತ್ತು ಶ್ರೀ ಚೈತನ್ಯ ಮಠ (ಶ್ರೀ ಕೃಷ್ಣ ಚೈತನ್ಯ ಪ್ರಭುಗಳು ಮತ್ತು ಗೌರಂಗ್ ಮಹಾಪ್ರಭುಗಳು) ಎರಡು ಈ ಸಾಲಿಗೆ ಸೇರಿದ ಮುಖ್ಯ ತಾಣಗಳು. ಸಮಯಾವಕಾಶ-ವಾದರೆ ಭೇಟಿ ಕೊಡಬಹುದು.

ತುಂಬಾ ಮುಖ್ಯವಾದ ನೋಡಲೇಬೇಕಾದ ಸ್ಥಳವೆಂದರೆ ಕಾಶಿ ಕರ್ವಟ್, ಇದನ್ನು ರತನೇಶ್ವರ ಮಂದಿರ್ ಎಂದೂ ಕರೆಯುತ್ತಾರೆ. ಇದೊಂದು ವಾಲು ದೇಗುಲ. ಅಚ್ಚರಿಯೆಂದರೆ ಪೀಸಾ ಗೋಪುರ 4 ಡಿಗ್ರಿಯಷ್ಟು ಬಾಗಿದ್ದರೆ ಇದು 9 ಡಿಗ್ರಿಯಷ್ಟು ಬಾಗಿದೆ. ವರ್ಷದ 6 ತಿಂಗಳು ನೀರಿನಲ್ಲಿ ಮುಳುಗಿರುತ್ತದೆ.

ನೀವು ಕಾಶಿಯಲ್ಲಿ ಎಷ್ಟು ದಿನ ವಾಸ್ತವ್ಯ ಹೂಡುತ್ತೀರಿ ಎಂಬುದರ ಮೇಲೆ ನೀವು ಏನೇನು ನೋಡಬಹುದು ಎಂಬುದನ್ನು ಯೋಜಿಸಬಹುದು. ಕಾಶಿ ವಿಶ್ವವಿದ್ಯಾಲಯ ಮತ್ತು ವಸ್ತು ಸಂಗ್ರಹಾಲಯ ಕೂಡ ನೋಡತಕ್ಕ ಜಾಗಗಳೇ! ಕೆಲವೊಮ್ಮ ನಾವು ಅಂದುಕೊಂಡಂತೆ ಎಲ್ಲಾ ಆಗುವುದಿಲ್ಲ. ಅದಕ್ಕಾಗಿ ಬೇಸರ, ನಿರಾಸೆ ಬೇಡ.ನಿಮ್ಮ ಶಕ್ತಿ ಚೈತನ್ಯಗಳ ವ್ಯಾಪ್ತಿಯಲ್ಲಿ ನಿಮ್ಮ ದೇಹ ಮತ್ತು ಮನಸ್ಸಿನ ಸಮತೋಲನ ಕಾಪಾಡಿಕೊಳ್ಳುವ ಪ್ರಯತ್ನ ಮಾಡಿ. ದೇವರ ಜೊತೆಗೆ ಅಲ್ಲಿನ ಜನಜೀವನ, ಸಂಸ್ಕೃತಿಯನ್ನೂ ಗಮನಿಸಿ. ಈ ಅನುಭವಗಳನ್ನೆಲ್ಲಾ ನಿಮ್ಮ ಸವಿನೆನಪಿನ ಒಂದು ಭಾಗವಾಗಿಸಿಕೊಳ್ಳಿ. ಎಲ್ಲಾ ನೋಡಿ ಮುಗಿದ ನಂತರ ಗಂಗೆಯ ಮಡಿಲಿಗಿಳಿದು ಪ್ರಕೃತಿಯ ಸೌಂದರ್ಯವನ್ನು ಕಣ್ತುಂಬಿಕೊಂಡು ಒಂದು ಸುತ್ತು ದೋಣಿ ವಿಹಾರ ಮಾಡಿ, (ಶ್ರೀರಾಮ ಸೀತೆಯೊಂದಿಗೆ ಹೀಗೇ ನೌಕಾವಿಹಾರ ಮಾಡಿದ್ದರಂತೆ) ಹಾಗೇ ನಿಮ್ಮ ಕಾಶಿಯ ದರ್ಶನಗಳನ್ನೆಲ್ಲಾ ಮೆಲುಕು ಹಾಕಿ, ಮಹದಾನಂದದಿಂದ ಸಂಭ್ರಮಿಸಿ. ಹರ ಹರ ಮಹಾದೇವ್!



# ರಾಮನೂರಿನಲ್ಲಿ ನಿತ್ಯ ರಾಮನವಮಿ!

ಶ್ರೀರಾಮನ ನಗರ ಅಯೋಧ್ಯೆಯಲ್ಲಿ ಪ್ರತಿದಿನವೂ ರಾಮನವಮಿಯೇ! ಇಡೀ ಅಯೋಧ್ಯೆ ವಸಂತ ಋತುವಿನ ನವೋತ್ಸಾಹದಲ್ಲಿ ಮಿಂದೆದ್ದು ನಳನಳಿಸುತ್ತಿದೆ. ಕಾಲಿಟ್ಟೆಡೆಯೆಲ್ಲಾ ರಾಮಭಕ್ತರೇ! ಎಲ್ಲೆಲ್ಲೂ ಜೈ ಶ್ರಿರಾಂ ಘೋಷಣೆ ಮೊಳಗಿ ನವಶಕ್ತಿ, ಚೈತನ್ಯಗಳನ್ನು ಉದ್ದೀಪನಗೊಳಿಸುತ್ತದೆ. ಗಲ್ಲಿ ಗಲ್ಲಿಗಳಲ್ಲಿ, ಬೀದಿ ಬೀದಿಗಳಲ್ಲಿ ಜಾತ್ರಾ ಮಹೋತ್ಸವದ ಸಂಭ್ರಮ. ಒಬ್ಬೊಬ್ಬರಲ್ಲೂ ಶ್ರೀ ರಾಮ ಆವಾಹಿತನಾಗಿ ಇಡೀ ಊರಿಗೇ ಊರೇ ರಾಮರ ಉತ್ಸವ ಹೊರಟಂತೆ ಕಾಣುತ್ತದೆ. ಆ ಸಡಗರವನ್ನು ನೋಡುತ್ತಿದ್ದರೆ ಹಸಿವು ಆಯಾಸಗಳೆಲ್ಲ ಮರೆತೇ ಹೋಗುತ್ತದೆ. ರಾಮ ನಮ್ಮ ಅಸ್ಮಿತೆ. ನಮ್ಮೆಲ್ಲಾ ವ್ಯಕ್ತಿಗತ ಆದರ್ಶಗಳ, ಸುವ್ಯವಸ್ಥಿತ ಆಡಳಿತ ಮಾದರಿಗಳ, ನಾಗರಿಕ ಜನಾಂಗದ ಆಶೋತ್ತರಗಳ ಸಂಕೇತ. ಹಾಗಾಗಿ ರಾಮನನ್ನು ನೋಡುವ ಈ ಅಭಿಯಾನವೊಂದು ಚೈತ್ರ ಯಾತ್ರೆ. ನಮ್ಮನ್ನೇ ನಾವು ಹುಡುಕಿಕೊಳ್ಳುವ, ರಾಮನ ಸನ್ನಿಧಿಯಲ್ಲಿ ಕಂಡುಕೊಳ್ಳುವ ಒಂದು ಪುಣ್ಯ ಯಾತ್ರೆ. ಹಲವು ಮಹಾನ್ ಚೇತನಗಳ ಶ್ರಮಸಂಚಯನವನ್ನು ಹಾಗೇ ಹಿಡಿದಿಟ್ಟು ಕಾಪಾಡಿಕೊಳ್ಳುವ ಸಂಕಲ್ಪ ಯಾತ್ರೆ. ಸೀತಾಮಾತೆ ಅಭಯಹಸ್ತದ ಪ್ರತೀಕವಾದ ರಾಮನ ಉಂಗುರ ಮರಳಿ ಪಡೆದಂತೆ, ನಮ್ಮ ಭಕ್ತಿಭಾವನೆಗಳ ಮರುಹಟ್ಟು ಪಡೆದ ವಿಜಯಯಾತ್ರೆ. ಈ ಎಲ್ಲಾ ದೃಷ್ಟಿಯಿಂದ ಅಯೋಧ್ಯಾ ಯಾತ್ರೆ ಮತ್ತು ಬಾಲರಾಮನ ದಿವ್ಯ ದರ್ಶನ ಅವಿಸ್ಮರಣೀಯ.ಮತ್ತು ನಮ್ಮ ಸುಕೃತ ಪುಣ್ಯ ಎಂದೇ ಭಾವಿಸಬೇಕು. ನಾವು ಸರದಿ ಸಾಲಿನಲ್ಲಿ ನಿಂತ 45 ನಿಮಿಷಗಳಲ್ಲೇ ನಮಗೆ ಬಾಲರಾಮನ ದಿವ್ಯ ರೂಪವನ್ನು ಕಣ್ತುಂಬಿಕೊಳ್ಳುವ ಸೌಭಾಗ್ಯ ಸಿಕ್ಕಿತು. ದೇವಾಲಯದ ಒಳಗೆ ಕಾಲಿಟ್ಟೊಡನೆ ಸರತಿ ಸಾಲಿನಲ್ಲೇ ಸುಮಾರು 15ಅಡಿಗಳ ದೂರದಿಂದ ರಾಮನ ದರ್ಶನವಾಗುತ್ತದೆ. ರಾಮ ಘೋಷಣೆಗಳ ನಡುವೆ ರಾಮನ ಭವ್ಯ ರೂಪವನ್ನು ಯಥೇಚ್ಛವಾಗಿ ಕಣ್ತುಂಬಿಕೊಳ್ಳುವ ಅವಕಾಶ ಇರುತ್ತದೆ. ಸುಮಾರು 6 ಅಡಿ ಹತ್ತಿರದ ತನಕ ಬಂದು ಅಲ್ಲಿಂದ ಎಡಕ್ಕೆ ನಿರ್ಗಮಿಸುವಲ್ಲಿಗೆ ಬಾಲ ರಾಮನ ದರ್ಶನ ಸಂಪನ್ನವಾಗುತ್ತದೆ. ನಿವೃತ್ತ ಐಎಎಸ್ ಅಧಿಕಾರಿಯೊಬ್ಬರು ತಮ್ಮ ಅಶಕ್ತ ವಯೋವೃದ್ಧ ತಾಯಿಗೆ ಆಸರೆಯಾಗಿ ಹಲವೆಡೆ ಶ್ರವಣಕುಮಾರನಂತೆ ಅವರನ್ನು ಮಗುವಂತೆ ತಮ್ಮ ತೋಳ್ತೆಕ್ಕೆಯಲ್ಲಿ ಎತ್ತಿಕೊಂಡು ರಾಮದರ್ಶನ ಮಾಡಿಸಿದರು. ಈ ತಾಯಿ ಮಗನ ವಾತ್ಸಲ್ಯ ನೋಡಿ ನನ್ನ ಕಣ್ತುಂಬಿ ಬಂತು. ಮೊಬೈಲ್ಗಳಿಗೆ ಅವಕಾಶವಿಲ್ಲ, ಅದು ಒಳ್ಳೆಯದೇ ಆಗಿದೆ ಎನಿಸುತ್ತದೆ. ರಾಮನ ಫೋಟೋ ತೆಗೆಯುವ ಭರದಲ್ಲಿ ಎದುರಿಗಿದ್ದ ರಾಮನನ್ನು ಕಣ್ತುಂಬಿಕೊಳ್ಳುವ ಅವಕಾಶ ಮನಸ್ಥಿತಿ ಕೈ ತಪ್ಪಿಹೋಗುತ್ತಿತ್ತು. ಆದರೆ ಈಗ ರಾಮನನ್ನು ನಿಮ್ಮ ಕಣ್ಣು, ಮನಸ್ಸು, ಹೃದಯಗಳ ತುಂಬಾ ತುಂಬಿಕೊಂಡು ಬರಬಹುದು. ಹಾಗೇ ರಾಮನನ್ನು ನೋಡುತ್ತಲೇ ನಿಮ್ಮ ಬಲಗೈ ಮುಷ್ಠಿಯನ್ನು ಬಿಗಿಗೊಳಿಸಿ ಹೆಬ್ಬೆರಳನ್ನು ಮಧ್ಯದ ಬೆರಳಿಗೆ ಒತ್ತಿಟ್ಟುಕೊಂಡು ರಾಮನ ರೂಪವನ್ನು ಕಣ್ತುಂಬಿಕೊಳ್ಳಿ (ಬೇರೆ ಯಾವುದೇ ರೀತಿಯ ನಿಮಗೆ ಅನುಕೂಲ ಎನಿಸಿದ ಮುದ್ರೆಯನ್ನೂ ನೀವು ಬಳಸಬಹುದು) ಹೊರಗೆ ಬಂದ ಮೇಲೆ ಕಣ್ಮುಚ್ಚಿ ರಾಮನ ರೂಪವನ್ನು ನೆನೆಸಿಕೊಂಡು ಈ ಮುದ್ರೆಯನ್ನು 4–5 ಬಾರಿ ಪುನಾರಾವರ್ತನೆ ಮಾಡಿ, ರಾಮ ನೀವು ಮುಷ್ಠಿ ಹಿಡಿದಾಗೆಲ್ಲಾ ನಿಮ್ಮ ಕಣ್ಮುಂದೆ ಕಾಣಿಸಿಕೊಳ್ಳುತ್ತಾನೆ. ನಿಮ್ಮ ಕಷ್ಟ ಸುಖದಲ್ಲಿ ನಿಮ್ಮೊಂದಿಗಿರುತ್ತಾನೆ. (ಎನ್.ಎಲ್.ಪಿ ಯಲ್ಲಿ ಇದನ್ನು ಆಂಕರಿಂಗ್ ಟೆಕ್ನಿಕ್ ಎಂದು ಕರೆಯುತ್ತಾರೆ) ಪ್ರಯಾಣದ ಆಯಾಸ, ನಡಿಗೆ, ಕಾದುನಿಲ್ಲುವ ಅನಿವಾರ್ಯತೆ, ಹವಮಾನ ಬದಲಾವಣೆಯ ಸಮಸ್ಯೆಗಳು ಎಲ್ಲಾ ಇದ್ದದ್ದೇ! ರಾಮ 14 ವರ್ಷ ವನವಾಸ ಹೋಗಿದ್ದರ ಮುಂದೆ ಈ ಚಿಕ್ಕ ವನವಾಸ ಕಷ್ಟವೇನಲ್ಲ. ಶ್ರೀ ಬಾಲರಾಮನ ದರ್ಶನಕ್ಕೆ ಹೋಗುವ ಭಕ್ತಬಂಧುಗಳಿಗೆ ಶುಭವಾಗಲಿ. ಆದಷ್ಟು ಶೀಘ್ರ ರಾಮನ ದರ್ಶನ ಭಾಗ್ಯ ದೊರೆಯುವ ಸೌಭಾಗ್ಯ ನಿಮ್ಮದಾಗಲಿ.

# ನೀವು ತಿಳಿಯಬೇಕಾದ ಬಬ್ಬೂರುಕಮ್ಮೆಗಳು



## ಶ್ರೀಯುತ ಆಹಿತಾಂಗಿ ರಾಘವೇಂದ್ರ ಶರ್ಮ

ಶ್ರೀಯುತ ಆಹಿತಾಗ್ನಿ ರಾಘವೇಂದ್ರ ಶರ್ಮರು ಮೂಲತಃ ಶಿವಮೊಗ್ಗ ಪಟ್ಟಣದವರು. ಶ್ರೀ ರಾಘವೇಂದ್ರರ ಜನನ 1979ನೇ ಇಸವಿಯಲ್ಲಿ ದಂಪತಿಗಳಾದ ತಂದೆ ಶ್ರೀ ರಾಮಭಟ್ಟರು ಹಾಗೂ ಶ್ರೀಮತಿ ಲಕ್ಷ್ಮೀ ಅವರಲ್ಲಿ ಮೈಸೂರಿನಲ್ಲಿ ಜನಿಸಿದರು. ಭಾರದ್ವಾಜ ಗೋತ್ರದವರಾದ ಇವರು ಲೌಕಿಕ ವಿದ್ಯೆಯನ್ನು ಹತ್ತನೇ ತರಗತಿಯವರೆಗೆ ಓದಿರುತ್ತಾರೆ. ಲೌಕಿಕ ವಿದ್ಯೆಯಲ್ಲಿ ಶ್ರೇಯಸ್ಸು ಇಲ್ಲವೆಂದು ಮನಗಂಡು ವೇದಾಧ್ಯಯನ ಮಾಡಬೇಕೆಂದು ಆಸಕ್ತಿ ಬಂದು ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿರುವ ಚಿದಂಬರ ಆಶ್ರಮದಲ್ಲಿ ಕೃಷ್ಣ ಯಜುರ್ವೇದದ ಕಾಲೋಚಿತ ಮಂತ್ರಗಳನ್ನು ಎರಡು ವರ್ಷಗಳವರೆಗೆ ಕಲಿತರು. ನಂತರ ವೇದಾಧ್ಯಯನವನ್ನು ಶಿವಮೊಗ್ಗದ ಸಂಸ್ಕೃತ ಗ್ರಾಮವೆಂದೇ ಪ್ರಸಿದ್ಧವಾಗಿರುವ ಮತ್ತೂರಿನಲ್ಲಿ ಆಗತಾನೇ ಪ್ರಾರಂಭವಾದ ವೇದಪಾಠಶಾಲೆಯಲ್ಲಿ ಅನಂತಶ್ರೀ ಅದ್ವಯಾನಂದೇಂದ್ರ ಸರಸ್ವತೀ ಸ್ವಾಮಿಗಳ (ಪೂರ್ವಾಶ್ರಮದಲ್ಲಿ ವೇ.ಬ್ರ.ಶ್ರೀ. ಚಂದ್ರಮೌಳಿ ಅವಧಾನಿಗಳಲ್ಲಿ) ಬಳಿ ಐದು ವರ್ಷಗಳವರೆಗೆ ಕೃಷ್ಣ ಯಜುರ್ವೇದವನ್ನು ಕ್ರಮಾಂತದವರೆಗೆ ಅಧ್ಯಯನ ಮಾಡಿರುತ್ತಾರೆ. ಆಮೇಲೆ ಅಲ್ಲೇ ಮತ್ತೂರಿನಲ್ಲಿ ಶ್ರೌತಾಧ್ಯಯನವನ್ನು ಅಂದರೆ ಅಗ್ನಿಹೋತ್ರದಿಂದ ಹಿಡಿದು ಅಗ್ನ್ಯಾದಾನ, ದರ್ಶಪೂರ್ಣಮಾಸ, ಚಾತುರ್ಮಾಸ್ಯ, ಪಶುಬಂಧ, ಸೋಮ, ವಾಜಪೇಯ ಚಯನಾಂತವಾಗಿ ಅಧ್ಯಯನ ಚೆನ್ನಾಗಿ ಮಾಡಿ ಅದರ ಪ್ರಯೋಗದಲ್ಲೂ ನಿಷ್ಣಾತರಾಗಿರುತ್ತಾರೆ.

ಸ್ಮಾರ್ತಕರ್ಮಗಳನ್ನು ಅದರಲ್ಲೂ ವಿಶೇಷವಾಗಿ ಶ್ರೌತಕರ್ಮಗಳನ್ನು ದಕ್ಷಿಣಭಾರತದಾತ್ಯಂತ ಮಾಡಿಸುವುದರಲ್ಲಿ ಬಹಳ ಬೇಡಿಕೆಯಲ್ಲಿರುತ್ತಾರೆ.

ಇದರ ಜೊತೆಜೊತೆಯಲ್ಲಿ ಶ್ರೌತದ ಬಗ್ಗೆ ಸಂಶೋಧನೆಯನ್ನು ಮಾಡುತ್ತಿರುತ್ತಾರೆ. ಭಾರತದಲ್ಲಿ ನಡೆಯುವ ಪ್ರತಿಷ್ಠಿತ ಶ್ರೌತ ಸದಸ್ಸುಗಳಲ್ಲಿ (ಗೋಷ್ಠಿಗಳು) ಭಾಗಹಿಸುತ್ತಿರುತ್ತಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಾಮವೇದ ಶ್ರೌತ ಸದಸ್ಸಿನಲ್ಲಿ ಪ್ರಮುಖಪಾತ್ರವನ್ನು ವಹಿಸಿದ್ದರು.

ಇದಲ್ಲದೇ ಸಂಸ್ಕೃತ ಸಾಹಿತ್ಯ ಮತ್ತು ನಾಟಕಗಳನ್ನು ಅಧ್ಯಯನ ಮಾಡಿರುತ್ತಾರೆ. ವೇದಾಂತದಲ್ಲಿ ಪ್ರಸ್ಥಾನತ್ರಯ ಭಾಷ್ಯವನ್ನು ಅಂದರೆ ಭಗವದ್ಗೀತೆ, ದಶೋಪನಿಷತ್ತು ಹಾಗೂ ಬ್ರಹ್ಮ ಸೂತ್ರಭಾಷ್ಯಗಳನ್ನು ವಿಶೇಷವಾಗಿ ಶಂಕರಾಚಾರ್ಯರು ಬರೆದ ಭಾಷ್ಯಾದಿಗಳನ್ನು ಚೆನ್ನಾಗಿ ಅಧ್ಯಯನವನ್ನು ಮಾಡಿರುತ್ತಾರೆ.

ಇವರು ವಿಜಯಲಕ್ಷ್ಮೀ ಎಂಬ ಸಾಧ್ವೀಮಣಿಯನ್ನು ವರಿಸಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿದ್ದಾರೆ. ಈ ದಂಪತಿಗಳಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಕ್ಕಳಿದ್ದಾರೆ. ಮಗನಿಗೆ ಮನೆಯಲ್ಲಿಯೇ ಸ್ವತಃ ವೇದಾಧ್ಯನವನ್ನು ಮಾಡಿಸುತ್ತಿದ್ದಾರೆ.

ವೈದಿಕವಾಗಿ ಕರ್ಮಠರಾಗಿ ಬದುಕುತ್ತಾ ಇರುವ ಶ್ರೀಯುತರು ಚಿಕ್ಕ, ಚೊಕ್ಕ ಮತ್ತು ತೃಪ್ತಿಯಿಂದ ಜೀವನವನ್ನು ನಡೆಸಿ ಸ್ವಗೃಹವನ್ನು ಮಾಡಿಕೊಂಡು ತಮ್ಮ ಕೃಷಿ ಭೂಮಿಯಲ್ಲಿ ತಾವೇ ಉತ್ತು ಬೆಳೆ ತೆಗೆಯುತ್ತಾರೆ ಎಂಬುದು ವಿಶೇಷ.

ಸ್ವತಃ ಅಗ್ನಿಹೋತ್ರಗಳಾಗಿ ನಿತ್ಯವಲ್ಲದೇ ಕಾಲಕಾಲಕ್ಕೆ ಅಂದರೆ ಪ್ರತೀ ಪೌರ್ಣಮಿಯಂದು ಪೌರ್ಣಮಾಸೇಷ್ಟಿ ಮತ್ತು ಪ್ರತೀ ಅಮವಾಸ್ಯೆಯಂದು ದರ್ಶೇಷ್ಟಿಯನ್ನು ಮಾಡುತ್ತಿರುತ್ತಾರೆ. ಇಡೀ ಕರ್ನಾಟಕದಲ್ಲಿ ಅಗ್ನಿಹೋತ್ರವನ್ನು ನಡೆಸಿಕೊಂಡು ಬರುತ್ತಿರುವ ಕೇವಲ ಹನ್ನೆರಡು ಜನರಲ್ಲಿ ಶ್ರೀಯುತರು ಒಬ್ಬರು. ಬಬ್ಬೂರುಕಮ್ಮೆ ಜನಾಂಗದಲ್ಲಿ ಕೇವಲ ಇಬ್ಬರು ಅಗ್ನಿಹೋತ್ರಿಗಳಲ್ಲಿ ಒಬ್ಬರು.

ಬಹುಮುಖ ಪ್ರತಿಭೆಗಳಿಂದ ಕೂಡಿದ ಶ್ರೀಯುತರು ಸಜ್ಜನರು, ಸದ್ಗೃಹಸ್ಥರೂ ಸತ್ವಜಗಳೂ, ಬಹಳ ವಿದ್ಯಾವಂತರಾಗಿದ್ದರೂ ಎಲೆ ಮರೆಯ ಕಾಯಿಯಂತೆ ಇದ್ದು ವಿನಯ ಮತ್ತು ಸ್ನೇಹದ ಗುಣಗಳಿಂದ ಸಮಾಜದಲ್ಲಿ ಎಲ್ಲರಿಗೂ ಬೇಕಾದವರಾಗಿದ್ದಾರೆ.

ಇವರು ಬ್ರಾಹ್ಮಣ ಸಮಾಜದಲ್ಲಿ ಒಬ್ಬ ಅನರ್ಘ್ಯ ರತ್ನ ಎಂದರೆ ಉತ್ಪ್ರೇಕ್ಷೆ ಆಗಲಾರದು. ನಮ್ಮ ಬಬ್ಬೂರುಕಮ್ಮೆ ಜನಾಂಗದ ಹೆಮ್ಮೆ.

ಇಂತಹ ವ್ಯಕ್ತಿಗಳು ನಮ್ಮ ಬಬ್ಬೂರುಕಮ್ಮೆ ಜನಾಂಗದಲ್ಲೂ ಮತ್ತು ಸಮಷ್ಟೀ ಬ್ರಾಹ್ಮಣ ಸಮುದಾಯದಲ್ಲಿ ಬಹಳ ಸಂಖ್ಯೆಯಲ್ಲಿ ಹೆಚ್ಚಲಿ ಹಾಗೂ ಕಡಿಮೆಯಾಗುತ್ತಿರುವ ಸನಾತನ ಧರ್ಮದಲ್ಲಿನ ಆಸಕ್ತಿಯು ಎಲ್ಲಾ ಬ್ರಾಹ್ಮಣರಲ್ಲೂ ಬಂದು ಶ್ರೇಯೋ ಮಾರ್ಗದಲ್ಲಿ ನಡೆಯಲಿ ಎಂದು ಬಬ್ಬೂರುಕಮ್ಮೆ ಸೇವಾ ಸಮಿತಿಯು ಹೃತ್ಪೂರ್ವಕವಾಗಿ ಆಶಿಸುತ್ತಾ ಶ್ರೀ ಆಹಿತಾಗ್ನಿ ರಾಘವೇಂದ್ರ ಶರ್ಮರನ್ನು ಬಬ್ಬೂರುಕಮ್ಮೆ ಬಳಗಕ್ಕೆ ಪರಿಚಯಿಸಲು ಹೆಮ್ಮೆ ಪಡುತ್ತದೆ.

---

## ಬಬ್ಬೂರುಕಮ್ಮೆ ವೆಬ್‌ಸೈಟ್

**ಬಬ್ಬೂರುಕಮ್ಮೆ ವೆಬ್‌ಸೈಟ್ ಅನ್ನು ಸಿದ್ಧಪಡಿಸಿ ಸದಸ್ಯರ ಉಪಯೋಗಕ್ಕಾಗಿ ಬಿಟ್ಟಿರುವುದು ಈಗಾಗಲೇ ತಮಗೆಲ್ಲಾ ತಿಳಿದಿರುವ ವಿಷಯ. ಇದನ್ನು ಉತ್ತಮಗೊಳಿಸಲು ಸಲಹೆ ಸೂಚನೆಗಳು ಇದ್ದರೆ ಸದಸ್ಯರುಗಳು ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಜಿ.ವಿ.ರಮೇಶ್ ಅವರಿಗೆ ನೀಡಬಹುದು. ಅವರ ಮೊಬೈಲ್ ಸಂಖ್ಯೆ : 9243418200**

**ನಮ್ಮ ವೆಬ್‌ಸೈಟ್ ವಿಳಾಸ : www.babboorkamme.org**



# ಗುಬ್ಬಿ ನಾರಾಯಣ ರಾಮಚಂದ್ರ

ರಾಮಚಂದ್ರರವರು ಜೋಡಿಗುಬ್ಬೀ ನಾರಾಯಣ ಮತ್ತು ಬೆಳವಾಡೀ ವೆಂಕಟಲಕ್ಷಮ್ಮ ದಂಪತಿಗಳ ಕಿರಿಯಪುತ್ರರು ಮತ್ತು ಶಾಸ್ತ್ರೀಯ ಸಂಗೀತದ ಖ್ಯಾತ ಗಾಯಕಿ ನಾಗಮಣಿ ಶ್ರೀನಾಥ್ ಇವರ ತಮ್ಮ.

ಇವರ ಪೂಜ್ಯರಾದ ತಂದೆಯವರು ಕನ್ನಡ ಮತ್ತು ಸಂಸ್ಕೃತದ ಪಂಡಿತರು, ಪ್ರಾಧ್ಯಾಪಕರೂ, ಪುರಾಣ ವಚನಕಾರರೂ ಆಗಿದ್ದರು. ತಂದೆ ತಾಯಿಯು ನಡೆದುಬಂದ ಅಧ್ಯಾತ್ಮ ತತ್ವದ ಹಾದಿ, ಪಡೆದ ಅನುಭವಗಳು, ಮಾಡಿದ ಪ್ರವಚನಗಳು ಮಗನನ್ನು ಕನ್ನಡ ಸಾಹಿತ್ಯದ ಮಹಾಕಾವ್ಯಗಳೂ ಮತ್ತು ಶ್ರೀ ಶಂಕರ ಭಗವತ್ಪಾದರ ಪ್ರಸ್ಥಾನತ್ರಯ ಭಾಷ್ಯಗಳ ಗ್ರಂಥಗಳನ್ನು ಅಧ್ಯಯನ ಮಾಡುತ್ತಾ, ಸರಳ ರೀತಿಯಲ್ಲಿ ಮನಮುಟ್ಟುವಂತೆ ತಿಳಿಗನ್ನಡದಲ್ಲೂ ಆಂಗ್ಲಭಾಷೆಯಲ್ಲೂ ಹಂಚುವಂತೆ ಮಾಡಿದೆ.

ರಾಮಚಂದ್ರರವರು ಮೃದಂಗವಾದಕರೂ ಗಾಯಕರೂ ಹೌದು. ಇವರು ವಿವಿದ ಆಧ್ಯಾತ್ಮಿಕ ಸಂಸ್ಥೆಗಳ ಸತ್ಸಂಗಗಳಲ್ಲಿ ಬೃಹದಾರಣ್ಯಕೋಪನಿಷತ್, ಈಶವಾಸ್ಯೋಪನಿಷತ್, ಮುಂಡಕೋಪನಿಷತ್, ಛಾಂದೋಗ್ಯೋಪನಿಷತ್, ಬ್ರಹ್ಮಸೂತ್ರ ಭಾಷ್ಯ ಈ ಗ್ರಂಥಗಳ ಶ್ರೀ ಶಂಕರರ ಭಾಷ್ಯಗಳ ಸಾರವನ್ನು ಪ್ರವಚನಗಳನ್ನು ಮಾಡುತ್ತಿದ್ದಾರೆ. ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ, ಶ್ರೀ ಸತ್ಯ ಸಾಯಿ ಸೇವಾ ಸಂಸ್ಥೆ ಬೆಂಗಳೂರು, ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಸುಬ್ರಮಣ್ಯಪುರ, ಶ್ರೀ ಶಿರಡಿ ಸಾಯಿ ಮಂದಿರ ಟ್ರಸ್ಟ್, ರಾಜರಾಜೇಶ್ವರಿ ನಗರ ಮತ್ತು ಶ್ರೀ ಶಂಕರ ಭಗವತ್ಪಾದ ಸೇವಾ ಸಮಿತಿ, ರಾಜ ರಾಜೇಶ್ವರಿ ನಗರ ಮುಂತಾದ ಕಡೆಗಳಲ್ಲಿ ತಮ್ಮ ವಿದ್ವತ್‌ಪೂರ್ಣ ಪ್ರವಚನಗಳನ್ನು ನೀಡುತ್ತಾ ಬಂದಿದ್ದಾರೆ.

ಇವರು ಭಾರತೀಯ ವಿಜ್ಞಾನ ಸಂಸ್ಥೆಯಿಂದ ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಗಳಿಸಿ ಬಿ.ಇ.ಎಂ.ಎಲ್. ಬೆಂಗಳೂರು ಇಲ್ಲಿ ಜನರಲ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸಿ ಈಗ ನಿವೃತ್ತಿ ಜೀವನವನ್ನು ಸಾಗಿಸುತ್ತಿದ್ದಾರೆ. ಇವರು ನಮ್ಮ ಬಬ್ಬೂರುಕಮ್ಮೆ ಎಂಬುದು ಹೆಮ್ಮೆಯ ವಿಷಯ.



# ಶ್ರೀಯುತ ರಾಜಶೇಖರ ಜೋಯಿಸರು

ಶ್ರೀಯುತ ರಾಜಶೇಖರ ಜೋಯಿಸರು ಮೂಲತಃ ತರೀಕೆರೆ ತಾಲೂಕಿನ ಲಕ್ಕವಳ್ಳಿ ಊರಿನವರು. ಇವರ ಜನನ 1986ನೇ ಇಸವಿಯಲ್ಲಿ ದಂಪತಿಗಳಾದ ತಂದೆ ಶ್ರೀ ಭಾಸ್ಕರ ಜೋಯಿಸರು ಹಾಗೂ ಶ್ರೀಮತಿ ಮಂಜುಳಾ ಅವರಲ್ಲಿ ಲಕ್ಕವಳ್ಳಿಯಲ್ಲಿ ಜನಿಸಿದರು. ಇವರ ತಂದೆಯವರು ಸಹ ವೈದಿಕರಾಗಿದ್ದುಕೊಂಡು ಸೋಮಪುರದಲ್ಲಿರುವ ಪ್ರಸನ್ನ ಸೋಮೇಶ್ವರ ದೇವಾಲಯದಲ್ಲಿ ಅರ್ಚಕರಾಗಿದ್ದುಕೊಂಡು ಭಗವತ್ಸೇವೆಯನ್ನು ಮಾಡುತ್ತಿದ್ದಾರೆ. ಇವರು ಲೌಕಿಕ ವಿದ್ಯೆಯನ್ನು ಪಿ.ಯೂ.ಸಿ. ತರಗತಿಯವರೆಗೆ ಓದಿರುತ್ತಾರೆ.

ಒಮ್ಮೆ ಮತ್ತೂರಿನಲ್ಲಿ ನಡೆದ ಸೋಮಯಾಗವನ್ನು ವೀಕ್ಷಿಸಲೆಂದು ಹೋದ ಇವರು ಅದರಿಂದ ಪ್ರಭಾವಿತರಾಗಿ ಇನ್ನು ಲೌಕಿಕ ವಿದ್ಯೆಯಲ್ಲಿ ಔನ್ನತ್ಯ ಇಲ್ಲವೆಂದು ಮನಗಂಡು ವೇದಾಧ್ಯಯನ ಮಾಡಬೇಕೆಂಬ ಹಂಬಲದಿಂದ ಲೌಕಿಕ ವಿದ್ಯೆಯಿಂದ ನಿವೃತ್ತರಾಗಿ ಶಿವಮೊಗ್ಗ ಜಿಲ್ಲೆಯ ಮತ್ತೂರಿನ ಬಳಿ ಇರುವ ಹೊಸಹಳ್ಳಿ ಗ್ರಾಮದಲ್ಲಿ ಈಗ ಮುಕ್ತರಾಗಿರುವ ಶ್ರೀ ಶ್ರೀ ವೇದಾನಂದ ಸ್ವಾಮಿಗಳು, ಪೂರ್ವಾಶ್ರಮದಲ್ಲಿ ವೇ.ಬ್ರಹ್ಮ.ಶ್ರೀ. ವೇಂಕಟಾಚಲ ಅವಧಾನಿಗಳ ಬಳಿ ಕೃಷ್ಣ ಯಜುರ್ವೇದವನ್ನು ಕ್ರಮಾಂತದವರೆಗೆ (ಸಂಹಿತೆ, ಪದ ಮತ್ತು ಕ್ರಮ) ಆಮೂಲಾಗ್ರವಾಗಿ ಅಧ್ಯಯನ ಮಾಡಿದ್ದಾರೆ. ಮಂತ್ರಭಾಗ ಹಾಗೂ ಸ್ಮಾರ್ತ ಪ್ರಯೋಗಗಳಲ್ಲಿ ಪ್ರಾವೀಣ್ಯವನ್ನು ಸಾಧಿಸಿದ್ದಾರೆ.

ಜಮದಗ್ನಿ ಗೊತ್ರದವರಾದ ಶ್ರೀಯುತರು ನಂತರ ನೆರೆಹೊರೆಯಲ್ಲಿರುವ ಸಂಸ್ಕೃತ ಗ್ರಾಮವೆಂದೇ ಖ್ಯಾತಿಯಾಗಿರುವ ಮತ್ತೂರಿಗೆ ಬಂದು ಶ್ರೀಶ್ರೀ ಅಕ್ಷರಾನಂದೇಂದ್ರ ಸರಸ್ವತೀ ಸ್ವಾಮಿಗಳ (ಪೂರ್ವಾಶ್ರಮದಲ್ಲಿ ವೇ.ಬ್ರಹ್ಮ.ಶ್ರೀ. ಅಶ್ವತ್ಥನಾರಾಯಣ ಅವಧಾನಿಗಳ) ಬಳಿ ವೇದಾಂತವನ್ನು ಅಂದರೆ ಪ್ರಸ್ಥಾನತ್ರಯ ವಿಷಯಗಳಾದ ಭಗವದ್ಗೀತೆ, ದಶೋಪನಿಷತ್ತುಗಳು ಮತ್ತು ಬ್ರಹ್ಮಸೂತ್ರಭಾಷ್ಯಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದ್ದಾರೆ. ತತ್ಸಂಬಂಧವಾದ ಶಂಕರಾಚಾರ್ಯರ ಭಾಷ್ಯ ವಾರ್ತಿಕಗಳನ್ನು ಓದಿಕೊಂಡು ಸರಿಯಾದ ಅರ್ಥವನ್ನು ತಿಳಿದುಕೊಂಡಿದ್ದಾರೆ. ಅವರಿಗೆ ಶಂಕರರ ತತ್ವಗಳು ಅಂದರೆ ಅಮಿತಾಸಕ್ತಿ.

ಮುಂದೆ ಮತ್ತೂರಿನಲ್ಲಿ ಶ್ರೌತದಲ್ಲಿಯೂ ಸಹ ತಕ್ಕ ಮಟ್ಟಿಗೆ ಅಧ್ಯಯನ ಮಾಡಿರುವ ಇವರು ಸೋಮಯಾಗಕ್ಕೆ ಬೇಕಾದಂತಹ ಗ್ರಾವಸ್ತುತ್ ಹಾಗೂ ಪೋತೃಗಳನ್ನು ಅರಿತುಕೊಂಡು ಋತ್ವಿಜರಾಗಿ ಭಾಗವಹಿಸುತ್ತಾರೆ. ಸಂಸ್ಕೃತ, ಸಂಸ್ಕೃತ ಸಾಹಿತ್ಯ ಹಾಗೂ ನಾಟಕಗಳನ್ನು ಅಧ್ಯಯನ ಮಾಡಿದ್ದಾರೆ.

ಶಂಕರರ ತತ್ವಗಳಿಂದ ಪ್ರಭಾವಿತರಾದ ಶ್ರೀಯುತರು ಶಾಸ್ತ್ರೀಯವಾದ, ಕರ್ಮಠವಾದ ಮತ್ತು ಸರಳವಾದ ಜೀವನವನ್ನು ನಡೆಸುತ್ತಿದ್ದಾರೆ. ಜೊತೆಗೆ ಶಂಕರರ ತತ್ವ ಪ್ರಚಾರ ಮತ್ತು ಸನಾತನ ಧರ್ಮದ ಪ್ರಚಾರ ಮಾಡುತ್ತಿರುವ ಇವರು ಸ್ವತಃ ಯಾವ ಪ್ರಚಾರವನ್ನೂ ಬಯಸದೆ ವೇದವನ್ನು ಮನೆಯಲ್ಲಿಯೇ ಯೋಗ್ಯ ವಿದ್ಯಾರ್ಥಿಗಳಿಗೆ ಅಧ್ಯಾಪನ ಮಾಡುತ್ತಿದ್ದಾರೆ.

ಶ್ರೀಯುತರು ವೈದಿಕರ ಲಕ್ಷಣವಾದ ಶಿಖೆ, ಬ್ರಹ್ಮವಸ್ತ್ರ ಇತ್ಯಾದಿಗಳನ್ನು ನೇಮನಿಷ್ಠೆಗಳಿಂದ ಪಾಲಿಸಿಕೊಂಡು ಬಂದಿರುತ್ತಾರೆ. ಇವರು ತಮ್ಮ ಊರಿನವರೇ ಆದ ಸೋಮಪುರದ ಲಕ್ಷ್ಮೀ ಎಂಬ ಸಾತ್ವಿಕಕನ್ಯೆಯನ್ನು ವರಿಸಿ ಗೃಹಸ್ಥಾಶ್ರಮವನ್ನು ಸೇರಿದ್ದಾರೆ. ಬೆಂಗಳೂರಿನಲ್ಲಿ ಸ್ವಗೃಹದಲ್ಲಿ ನೆಲೆಸಿರುವ ಇವರು ಅಧ್ಯಾಪನ ಮತ್ತು ಪೌರೋಹಿತ್ಯವನ್ನು ಮಾಡುತ್ತಾ ಕಟ್ಟುನಿಟ್ಟಿನ ಜೀವನವನ್ನು ನಡೆಸುತ್ತಿದ್ದಾರೆ. ಈ ದಂಪತಿಗಳಲ್ಲಿ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಇವರು ಕುಟುಂಬದವರೊಂದಿಗೆ ಸರಳವಾಗಿ ಅನ್ಯೋನ್ಯವಾಗಿ ಬಾಳುತ್ತಿದ್ದಾರೆ.

ಇವರು ಬ್ರಾಹ್ಮಣ ಸಮಾಜದಲ್ಲಿ ಒಬ್ಬ ಅಪರೂಪದ ವ್ಯಕ್ತಿ ಎಂದರೆ ಉತ್ಪ್ರೇಕ್ಷೆ ಆಗಲಾರದು. ನಮ್ಮ ಬಬ್ಬೂರುಕಮ್ಮೆ ಜನಾಂಗದ ಹೆಮ್ಮೆ.

ಇಂತಹ ವ್ಯಕ್ತಿಗಳು ನಮ್ಮ ಬಬ್ಬೂರುಕಮ್ಮೆ ಜನಾಂಗದಲ್ಲೂ ಮತ್ತು ಸಮಷ್ಠೀ ಬ್ರಾಹ್ಮಣ ಸಮುದಾಯದಲ್ಲಿ ಬಹಳ ಸಂಖ್ಯೆಯಲ್ಲಿ ಹೆಚ್ಚಲಿ ಹಾಗೂ ಕಡಿಮೆಯಾಗುತ್ತಿರುವ ಸನಾತನ ಧರ್ಮದಲ್ಲಿನ ಆಸಕ್ತಿಯು ಎಲ್ಲಾ ಬ್ರಾಹ್ಮಣರಲ್ಲೂ ಬಂದು ಶ್ರೇಯೋ ಮಾರ್ಗದಲ್ಲಿ ನಡೆಯಲಿ ಎಂದು ಬಬ್ಬೂರುಕಮ್ಮೆ ಸೇವಾ ಸಮಿತಿಯು ಹೃತ್ಪೂರ್ವಕವಾಗಿ ಆಶಿಸುತ್ತಾ ಶ್ರೀಯುತ ರಾಜಶೇಖರ ಜೋಯಿಸರನ್ನು ಬಬ್ಬೂರುಕಮ್ಮೆ ಬಳಗಕ್ಕೆ ಪರಿಚಯಿಸಲು ಹೆಮ್ಮೆ ಪಡುತ್ತದೆ.

## 2,00,000 ರೂ. ದೇಣಿಗೆ

**ಶ್ರೀಮತಿ ಮಾಲಿನಿ ಸ್ವಾಮಿ ರವರ ಮಾತಾ ಪಿತೃಗಳಾದ ಶ್ರೀಮತಿ ದಿ.ಗೌರಿ ರಾಮಣ್ಣ ಹಾಗೂ ಶ್ರೀ ದಿ.ಎ.ಎನ್.ರಾಮಣ್ಣ ಅವರ ನೆನಪಿನಲ್ಲಿ ಬಬ್ಬೂರುಕಮ್ಮೆ ಸೇವಾ ಸಮಿತಿಗೆ 2,00,000 ರೂಪಾಯಿಗಳನ್ನು ದೇಣಿಗೆ ನೀಡಿ, ಇದನ್ನು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು ತಿಳಿಸಿರುತ್ತಾರೆ. ಶ್ರೀಮತಿ ಮಾಲಿನಿ ಸ್ವಾಮಿ ಅವರಿಗೆ ಸಮಿತಿಯು ಧನ್ಯವಾದಗಳನ್ನು ಸಮರ್ಪಿಸುತ್ತದೆ.**

# ದಿನಾಂಕ 17-12-2023 ರ ಬಳಗಕೂಟದ ಸಂಕ್ಷಿಪ್ತ ವರದಿ

ಗಾಂಧಿನಗರದ ಬಬ್ಬೂರುಕಮ್ಮೆ ಸೇವಾಸಮಿತಿಯು ಏರ್ಪಡಿಸಿದ್ದ ಬಳಗಕೂಟ-2022 ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಗೌರವಾನ್ವಿತ ಜಸ್ಟೀಸ್ ಅರವಿಂದ್ ಕುಮಾರ್, ನ್ಯಾಯಮೂರ್ತಿಗಳು, ಸರ್ವೋಚ್ಚನ್ಯಾಯಾಲಯ, ನವದೆಹಲಿ ಅವರು ಭಾಗವಹಿಸಿ, ಇಡೀ ದಿನ ನಮ್ಮ ಬಬ್ಬೂರುಕಮ್ಮೆ ಬಾಂಧವರಜೊತೆ ಸಕ್ರಿಯವಾಗಿ ತೊಡಗಿದ್ದರು. ಇದೇ ಸಂದರ್ಭದಲ್ಲಿ 90 ವರ್ಷ ಹಾಗೂ ಮೇಲ್ಪಟ್ಟ ಹಿರಿಯರಿಗೆ ಮತ್ತು 50 ವರ್ಷ ದಾಂಪತ್ಯ ಜೀವನ ನಡೆಸಿದ ದಂಪತಿಗಳಿಗೆ ಮತ್ತು ನವ ವಿವಾಹಿತ ದಂಪತಿಗಳನ್ನು ಸನ್ಮಾನಿಸಿ ಆನಂದ ಪಟ್ಟರು.

ಸಮಿತಿಯ ಅಧ್ಯಕ್ಷರಾದ ಡಾ. ಎ.ವಿ.ಪ್ರಸನ್ನ ಅವರು ಅಧ್ಯಕ್ಷತೆ ವಹಿಸಿದ್ದರು ಹಾಗೂ ಎಲ್ಲರನ್ನೂ ಸ್ವಾಗತಿಸಿದರು. ಸಮಿತಿಯ ಗೌರವ ಕಾರ್ಯದರ್ಶಿಗಳಾದ ಡಾ. ಎನ್. ಸತ್ಯಪ್ರಕಾಶ್‌ರವರು ಸಂಕ್ಷಿಪ್ತ ವರದಿಯನ್ನು ನೀಡಿದರು. ಮಧ್ಯಾಹ್ನ ಭೋಜನದ ನಂತರ ಸಮಿತಿಯ ಸದಸ್ಯರುಗಳಿಂದ ಮನೋರಂಜನಾ ಕಾರ್ಯಕ್ರಮಗಳನ್ನು ನಡೆಸಲಾಯಿತು. ಹಾಗೂ ಹಾಸ್ಟೆಲ್‌ನ ವಿದ್ಯಾರ್ಥಿನಿಯರು ಮನೋಜ್ಞವಾಗಿ ಸಮೂಹ ನೃತ್ಯ ಪ್ರದರ್ಶನವನ್ನು ನೀಡಿದರು.

## 17.12.2023 ರಂದು ಸಮಿತಿಯ ಸಭಾಂಗಣದಲ್ಲಿ ನಡೆದ 2023 ರ ಬಳಗ ಕೂಟದ ಕಾರ್ಯಕ್ರಮದ ಕೆಲವು ಚಿತ್ರಗಳು














ವಾರ್ಷಿಕ ಬಳಗಕೂಟ - 2023


ವಾರ್ಷಿಕ ಬಳಗಕೂಟ - 2023








ವಾರ್ಷಿಕ ಬಳಗಕೂಟ - 2023


ವಾರ್ಷಿಕ ಬಳಗಕೂಟ - 2023


ವಾರ್ಷಿಕ ಬಳಗಕೂಟ - 2023













# ಆಚಾರ್ಯ ಬಿ.ಎಂ.ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ-2023ರ ವರದಿ

ಜನಜೀವನದ ಆಚಾರ,ವಿಚಾರ ಜನಪದೀಯ ಸಂಸ್ಕೃತಿಯ ಅಧ್ಯಯನದೊಂದಿಗೆ ಅವರೊಂದಿಗೆ ಒಡನಾಡಿ ಸಾಕ್ಷಾತ್ ಅನುಭವವನ್ನು ದಕ್ಕಿಸಿಕೊಂಡದ್ದು ತಮ್ಮ ಕಾದಂಬರಿಗಳ ಯಶಸ್ಸಿನ ಗುಟ್ಟು ಎಂದು ಖ್ಯಾತ ಕಾದಂಬರಿಕಾರ ಹಾಗೂ ಪದ್ಮ ಭೂಷಣ ಪುರಸ್ಕೃತ ಸಾಹಿತಿ ಡಾ.ಎಸ್.ಎಲ್ ಭೈರಪ್ಪ ಅಭಿಪ್ರಾಯಪಟ್ಟರು. ಅವರು ಸೋಮವಾರ ಬೆಂಗಳೂರಿನ ಬಬ್ಬೂರು ಕಮ್ಮೆ ಸೇವಾಸಮಿತಿಯ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಆಚಾರ್ಯ ಬಿ.ಎಂ.ಶ್ರೀ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು




ಭಾರತೀಯರ ಸಾಹಿತ್ಯ ಸಂವೇದನೆ ಮತ್ತು ಸಾಂಸ್ಕೃತಿಕ ಮೌಲ್ಯಗಳು ವೈವಿಧ್ಯಮಯವಾಗಿದ್ದರೂ ತಾತ್ವಿಕ ಚಿಂತನೆ ಮತ್ತು ಜೀವನಾಶಯಗಳು ಏಕತ್ರವಾಗಿವೆ. ಹಾಗಾಗಿ ಯಾವುದೇ ಭಾಷೆಯ ಮೂಲಕ ಆಯಾ ಕಾಲಘಟ್ಟದ ಜೀವನಕ್ರಮ ಕಟ್ಟಿಕೊಡುವುದೇ ಮುಖ್ಯ. ಈ ಕಾರಣದಿಂದಲೇ ನಾನು ಕನ್ನಡದಲ್ಲಿ ಬರೆಯುವ ಭಾರತೀಯ ಬರಹಗಾರ ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ ಎಂದರು. ಸವಲತ್ತು, ಐಶಾರಾಮಿ ಬದುಕಿನ ಪ್ರಲೋಭನೆಗಳಿಗೆ ಒಳಗಾಗದೆ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಮೇಲಿನ ಹಿಡಿತವನ್ನು ಕಾಯ್ದುಕೊಳ್ಳುವ ಎಚ್ಚರಿಕೆಯ ಪ್ರಜ್ಞೆ ಬರಹಗಾರರಿಗೆ ಇರಬೇಕು ಎಂದು ಅವರು ಕಿವಿಮಾತು ಹೇಳಿದರು.

ಬಿಎಂಶ್ರೀ ಅವರ ನವೋದಯ ಸಾಹಿತ್ಯವೇ ನಮ್ಮೆಲ್ಲ ಬರವಣಿಗೆಯ ಬುನಾದಿ.ಅವರ ಸಾಹಿತ್ಯದ ಹೆಗಲ ಮೇಲೆ ಕುಳಿತು ಅವರ ಕಾಣ್ಕೆಗಳ ದರ್ಶನ ಭಾಗ್ಯ ಪಡೆದವರಲ್ಲಿ ನಾನೂ ಒಬ್ಬ ಎಂದ ಅವರು ಬಿಎಂಶ್ರೀ ಅವರ ಕರುಣಾಳು ಬಾ ಬೆಳಕೆ..ಕವಿತೆ ಜನಮನದ ನಿತ್ಯ ಪ್ರಾರ್ಥನಾ ಗೀತೆಯಾಗಬೇಕು ಎಂದರು

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಜಸ್ಟೀಸ್ ಬಿ.ಎನ್. ಶ್ರೀಕೃಷ್ಣ ಮಾತನಾಡಿ ಸಾಹಿತಿಗಳ ಜವಾಬ್ದಾರಿ ಸಮಾಜದ ಓರೆಕೋರೆಗಳನ್ನು ತಿದ್ದಿ ವಿವಿಧ ಕಾಲಘಟ್ಟಗಳ ಜನಜೀವನ, ಸಂಸ್ಕೃತಿಯನ್ನು ದಾಖಲಿಸುವುದೇ ಆಗಿದೆ. ಈ ಕೆಲಸವನ್ನು ಅತ್ಯಂತ ಸಮರ್ಥವಾಗಿ ಮಾಡಿರುವ ಭೈರಪ್ಪನವರು ವಿಶ್ವಕವಿ ಎಂದು ಬಣ್ಣಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಬ್ಬೂರು ಕಮ್ಮೆ ಸೇವಾಸಮಿತಿಯ ಅಧ್ಯಕ್ಷ ಡಾ.ಎ.ವಿ. ಪ್ರಸನ್ನ ಮಾತನಾಡಿ ಆಚಾರ್ಯ ಬಿ.ಎಂ.ಶ್ರೀ ನವೋದಯ ಸಾಹಿತ್ಯಕ್ಕೆ ನಾಂದಿ ಹಾಡಿದ ಶ್ರೇಷ್ಠ ಕನ್ನಡ ಬರಹಗಾರರು. ಸರಳ ಗದ್ಯಪ್ರಕಾರದ ಮೂಲಕ ಕನ್ನಡವನ್ನು ಜನಪ್ರಿಯಗೊಳಿಸಿದವರು. ಅಂತಹವರ ಹೆಸರಿನಲ್ಲಿ

ನೀಡುತ್ತಿರುವ ಪ್ರಶಸ್ತಿಗೆ ಡಾ.ಭೈರಪ್ಪನವರಂತೆ ಪಾತ್ರತೆಯನ್ನು ಹೊಂದಿರುವ ಶ್ರೇಷ್ಠ ವ್ಯಕ್ತಿ ಮತ್ತೊಬ್ಬರಿಲ್ಲ ಎಂದರು.

ಸಮಾರಂಭದಲ್ಲಿ ಡಾ. ಎಸ್.ಎಲ್. ಭೈರಪ್ಪನವರಿಗೆ 2023ನೇ ಸಾಲಿನ ಆಚಾರ್ಯ ಬಿ.ಎಂ.ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮುಖ್ಯ ಅತಿಥಿ ಜಸ್ಟಿಸ್ ಬಿ.ಎನ್. ಶ್ರೀ ಕೃಷ್ಣ ಅವರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಸಮುದಾಯದ ಸಾಧಕರನ್ನು ಸನ್ಮಾನಿಸಲಾಯಿತು. ವಿವಿಧ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಸಮುದಾಯದ 125ಕ್ಕೂ ಹೆಚ್ಚು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ, ಸಂಸ್ಕೃತ ಭಾಷೆಯಲ್ಲಿ ಪರಿಣಿತಿ ಪಡೆದ ವಿದ್ಯಾರ್ಥಿಗಳಿಗೆ ಶಾರದಾ ಶಂಕರ ಪುರಸ್ಕಾರ ನೀಡಲಾಯಿತು. ಸಮಿತಿಯ ಸದಸ್ಯ ರಮೇಶ್ ಜೋಯಿಸ್ ಸ್ವಾಗತಿಸಿದರು. ಸಮಿತಿಯ ಸದಸ್ಯೆ ಸುಧಾ ಪ್ರಸಾದ್ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಸಮಿತಿಯ ಉಪಾಧ್ಯಕ್ಷ ಡಾ.ಬಿ.ಕೆ. ಪ್ರಭಾಕರ್ ವಂದಿಸಿದರು. ಕಾರ್ಯದರ್ಶಿ ಡಾ.ಎನ್. ಸತ್ಯಪ್ರಕಾಶ್, ಖಜಾಂಚಿ ನಾಗಭೂಷಣ್, ಸಹಕಾರ್ಯದರ್ಶಿ ಉದಯಕುಮಾರ್ ಮತ್ತು ಕಾರ್ಯಕಾರೀ ಸಮಿತಿಯ ನಿರ್ದೇಶಕರು ಉಪಸ್ಥಿತರಿದ್ದರು

**ಕನ್ನಡಪ್ರಭ**

# ನಾನು ಕನ್ನಡದಲ್ಲಿ ಬರೆಯುತ್ತಿರುವ ಭಾರತದ ಬರಹಗಾರ: ಭೈರಪ್ಪ

## ಬಬ್ಬೂರುಕಮ್ಮೆ ಸಮಿತಿಯಿಂದ ಸಾಹಿತಿಗೆ ಆಚಾರ್ಯ ಬಿಎಂಶ್ರೀ ಪ್ರಶಸ್ತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಾನು ಕನ್ನಡದ ಲೇಖಕ ಮಾತ್ರವಲ್ಲ, ಭಾರತದ ಲೇಖಕ. ನಾನು ಕನ್ನಡದಲ್ಲಿ ಬರೆಯುತ್ತಿರುವ ಭಾರತದ ಬರಹಗಾರ ಎಂದು ಹಿರಿಯ ಸಾಹಿತಿ, ಪದ್ಮಭೂಷಣ ಎಸ್.ಎಲ್. ಭೈರಪ್ಪ ಹೇಳಿದರು.

ಸೋಮವಾರ ಬಬ್ಬೂರುಕಮ್ಮೆ ಸೇವಾ ಸಮಿತಿಯ 2023ರ ಸಾಲಿನ 'ಆಚಾರ್ಯ ಬಿಎಂಶ್ರೀ ಪ್ರಶಸ್ತಿ'ಯನ್ನು ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಬಿ. ಎನ್. ಶ್ರೀಕೃಷ್ಣ ಅವರಿಂದ ಸ್ವೀಕರಿಸಿ ಮಾತನಾಡಿದರು.

ಮಹಾರಾಷ್ಟ್ರದ ಮರಾಠಿ ಜನರು ನನ್ನನ್ನು ಕನ್ನಡದಲ್ಲಿ ಬರೆಯುವ ಮರಾಠಿ ಬರಹಗಾರ ಎಂದು ಭಾವಿಸುತ್ತಾರೆ. ಅದೇ ರೀತಿಯಲ್ಲಿ ಬೇರೆ ಭಾಷೆಗಳ ಜನತೆಯಲ್ಲಿಯೂ ಇಂತಹ ಭಾವನೆಯಿದೆ. ಈಗಿನ ಹಲವು ಲೇಖಕರು ನಾವು ಕನ್ನಡದವರು, ನಮ್ಮದೇ ಬೇರೆ, ಭಾರತವೇ ಬೇರೆ ಅಂದುಕೊಳ್ಳುತ್ತಾರೆ. ಆದರೆ, ನಾನು ಖಂಡಿತವಾಗಿ ಬರೀ ಕನ್ನಡದವನು ಎಂದುಕೊಳ್ಳುವುದಿಲ್ಲ. ಬರವಣಿಗೆಯಲ್ಲಿ ಇರುವ ಶಕ್ತಿ ಇದಕ್ಕೆ ಕಾರಣ ಎಂದು ಹೇಳಿದರು.

ಭಾರತದಲ್ಲಿ ಪ್ರದೇಶಕ್ಕೆ ಅನುಸಾರ ಆಚರಣೆಯ ವಿಧಾನಗಳಲ್ಲಿ ವಿಭಿನ್ನತೆ ಇದ್ದರೂ ಮೂಲಸಂಸ್ಕೃತಿ, ತತ್ತ್ವ ಒಂದೇ ಆಗಿದೆ. ವೃತ್ತಿ, ಬರವಣಿಗೆಗಾಗಿ ದೇಶಾದ್ಯಂತ ಸಂಚರಿಸಿದಾಗ ಒಂದು ಪ್ರದೇಶಕ್ಕೂ ಇನ್ನೊಂದು ಪ್ರದೇಶಕ್ಕೂ ಆಚರಣೆಯಲ್ಲಿ ವ್ಯತ್ಯಾಸ ಕಂಡುಬಂದಿದೆ. ಆದರೆ, ಅಲ್ಲಿನ ಶ್ರೀಸಾಮಾನ್ಯರ ಜೀವನಕ್ರಮ, ಅದರಲ್ಲಿನ ವಿಶೇಷತೆಗಳು, ಅವರ ಆಚರಣಾ ಪದ್ಧತಿ ಗಮನಿಸಿದಾಗ ಭಾರತದ ಮೂಲಸಂಸ್ಕೃತಿ ಒಂದೇ ಎಂಬುದು ಅನುಭವಕ್ಕೆ ಬಂದಿದೆ ಎಂದರು. ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಬಿ. ಎನ್. ಶ್ರೀಕೃಷ್ಣ ಮಾತನಾಡಿದರು.

ಸೇವಾ ಸಮಿತಿಯ ಅಧ್ಯಕ್ಷ ಡಾ. ಎ. ವಿ. ಪ್ರಸನ್ನ ಮಾತನಾಡಿ, ಭೈರಪ್ಪರಂತಹ ಮೇರು ಸಾಹಿತಿಗೆ ಪ್ರಶಸ್ತಿ ನೀಡುತ್ತಿರುವುದು ನಮಗೆ ಹೆಮ್ಮೆಯ ವಿಚಾರ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಬ್ಬೂರುಕಮ್ಮೆ ಸಮುದಾಯದ ವಿವಿಧ ಕ್ಷೇತ್ರದ 12 ಸಾಧಕರಿಗೆ ಸಾಧಕರತ್ನ ಪ್ರಶಸ್ತಿ, ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಪ್ರದಾನ ಮಾಡಲಾಯಿತು.



ಬಬ್ಬೂರುಕಮ್ಮೆ ಸೇವಾ ಸಮಿತಿಯ 'ಆಚಾರ್ಯ ಬಿ.ಎಂ.ಶ್ರೀ ಪ್ರಶಸ್ತಿ'ಯನ್ನು ಹಿರಿಯ ಸಾಹಿತಿ, ಪದ್ಮಭೂಷಣ ಎಸ್. ಎಲ್. ಭೈರಪ್ಪ ಅವರಿಗೆ ಸುಪ್ರೀಂ ಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಬಿ. ಎನ್. ಶ್ರೀಕೃಷ್ಣ ಪ್ರದಾನ ಮಾಡಿದರು.

# ಆಚಾರ್ಯ ಬಿ.ಎಂ.ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದ ಸಂದರ್ಭ









## ಸಾಧಕರಿಗೆ ಸನ್ಮಾನದ ಕೆಲವು ತುಣುಕುಗಳು






## ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ಚಿತ್ರಗಳು




























## 2024 ಮಾರ್ಚ್ 23 ಹಾಗೂ 24ರಂದು ನಡೆದ ಅಂತರ ವಿದ್ಯಾರ್ಥಿನಿಲಯಗಳ ಸಾಂಸ್ಕೃತಿಕ ಮತ್ತು ಕ್ರೀಡಾಸ್ಪರ್ಧೆಗಳ ಸಂಕ್ಷಿಪ್ತ ವರದಿ

ಈ ಸ್ಪರ್ಧೆಗೆ ಸುಮಾರು 30–35 ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗಿತ್ತು. ಸುಮಾರು 20 ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಮಾರ್ಚ್ 23 ಶನಿವಾರದಂದು ಮಧ್ಯಾಹ್ನ 3.30ಕ್ಕೆ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವು ಚಾಲನೆಗೊಂಡಿತು ರವೀಂದ್ರ ಸಂಘದ ಅಧ್ಯಕ್ಷರಾದ ಯಶಸ್ ಹಾಗೂ ಬೇರೆ ವಿದ್ಯಾರ್ಥಿನಿಲಯಗಳಿಂದ ಆಗಮಿಸಿದ ಇಬ್ಬರು ವಿದ್ಯಾರ್ಥಿಗಳು ದೀಪ ಬೆಳಗಿಸಿದರು. ನಿತಿನ್ ಹಾಗೂ ಅನಿರುದ್ ಪ್ರಾರ್ಥನಾ ಗೀತೆಯನ್ನು ಹಾಡಿದರು.

ಈ ದಿನ ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಕೋಡಿಂಗ್ ಚೆಸ್ ಮತ್ತು ಗಾಯನ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಗಾಯನ ಸ್ಪರ್ಧೆಗೆ ತೀರ್ಪುಗಾರರಾಗಿ ಶ್ರೀಮತಿ ರಮ್ಯಾ ವಸಿಷ್ಠ ಹಾಗೂ ವಿದ್ವಾನ್ ಪ್ರಶಾಂತ್‌ರವರನ್ನು ಆಹ್ವಾನಿಸಲಾಗಿತ್ತು. ಎಲ್ಲಾ ಸ್ಪರ್ಧೆಗಳನ್ನೂ ನಿರ್ದಿಷ್ಟ ಅವಧಿಯಲ್ಲೇ ಮುಗಿಸಲಾಯಿತು. ಸ್ಪರ್ಧಿಗಳಿಗೆ ಸಂಜೆಯ ಕಾಫಿ ಮತ್ತು ರಾತ್ರಿಯ ಊಟವನ್ನು ವ್ಯವಸ್ಥೆ ಮಾಡಲಾಗಿತ್ತು.

24 ಭಾನುವಾರದಂದು ಕೇರಂ, ಎನ್.ಎಫ್.ಎಸ್. ರಸಪ್ರಶ್ನೆ, ಐ.ಪಿ.ಎಲ್. ಆಕ್ಷನ್, ಆಶುಭಾಷಣ, ಹಗ್ಗ ಜಗ್ಗಾಟ ಹಾಗೂ ಬಿ.ಜಿ.ಎಂ.ಐ. ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಬೆಳಿಗ್ಗೆ ಸುಮಾರು 8.30ಕ್ಕೆ ಪ್ರಾರಂಭವಾಗಿ ನಿರ್ದಿಷ್ಟ ಸಮಯಕ್ಕೆ ಮುಗಿದವು. ಆಶುಭಾಷಣ ಸ್ಪರ್ಧೆಗೆ ನಿರ್ಣಾಯಕರಾಗಿ ನಾಗವೇಣಿ ಕಾರಂತ್ ಹಾಗೂ ಸುಧಾ ಭಟ್ ರವರು ಆಗಮಿಸಿದ್ದರು.

ಸಂಜೆ 7 ಘಂಟೆಗೆ ಸಮಾರೋಪ ಸಮಾರಂಭ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಬ್ಬೂರುಕಮ್ಮೆ ಸೇವಾ ಸಮಿತಿಯ ಅಧ್ಯಕ್ಷರಾದ ಡಾ.ಎ.ವಿ.ಪ್ರಸನ್ನರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಮ್ಮ ಹಾಸ್ಟೆಲ್ಲಿನ ಹಿರಿಯ ವಿದ್ಯಾರ್ಥಿ ಹಾಗೂ ಖ್ಯಾತ ವಕೀಲರಾಗಿರುವ ಎ.ಎನ್.ಕೃಷ್ಣಸ್ವಾಮಿಯವರು ಆಗಮಿಸಿದ್ದರು. ಹಾಗೆಯೇ





ವೇದಿಕೆಯ ಮೇಲೆ ನಮ್ಮ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ.ಎನ್.ಸತ್ಯಪ್ರಕಾಶ್ ಮತ್ತು ನಮ್ಮ ಹಾಸ್ಟೆಲ್ಲಿನ ಸಂಚಾಲಕರಾದ ಶ್ರೀ ಶಿವಮೂರ್ತಿಯವರು ಅವರೊಂದಿಗೆ ರವೀಂದ್ರ ಸಂಘದ ಅಧ್ಯಕ್ಷರಾದ ಶ್ರೀ ಯಶಸ್‌ರವರು ಉಪಸ್ಥಿತರಿದ್ದರು. ವೇದಿಕೆಯ ಮೇಲಿರುವ ಗಣ್ಯರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅನಂತರ ಮುಖ್ಯ ಅತಿಥಿಗಳನ್ನು ಅಧ್ಯಕ್ಷರು ಸನ್ಮಾನಿಸಿದರು. ತದನಂತರ ಮಾತನಾಡಿದ ಮುಖ್ಯ ಅತಿಥಿಗಳು ತಮ್ಮ ಹಾಸ್ಟೆಲ್ ಜೀವನ ಮತ್ತು ವಕೀಲ ವೃತ್ತಿಯ ಬಗ್ಗೆ ವಿವರಿಸಿದರು.

ನಂತರ ಯಶಸ್‌ರವರು ರವೀಂದ್ರ ಸಂಘ ನಡೆದುಬಂದ ದಾರಿಯನ್ನು ವಿವರಿಸಿದರು. ಹಾಗೆಯೇ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ನಂತರ ಹೆಚ್.ಕೆ.ಎಸ್.ಪಿ.ಜಿ. ವಿದ್ಯಾಥಿನಿಲಯದ ಪ್ರಣವ್‌ರವರು ಮಾತನಾಡಿ, ಕಾರ್ಯಕ್ರಮ ನಡೆಸಿದ ಬಗ್ಗೆ ಸಂತಸ ವ್ಯಕ್ತಪಡಿಸಿ ಅಭಿನಂದಿಸಿದರು. ನಂತರ ಪರಿಣಿತ್‌ರವರು ಬಹುಮಾನ ವಿತರಣಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಅತಿಹೆಚ್ಚು ಸ್ಪರ್ಧೆಗಳಲ್ಲಿ ವಿಜೇತರಾದ ಹಾಸ್ಟೆಲ್ಲಿಗೆ ಸಮಗ್ರ ಪ್ರಶಸ್ತಿಯನ್ನು ನೀಡಲಾಯಿತು. ಕಾರ್ಯಕ್ರಮವನ್ನು ಸಾತ್ವಿಕ್ ನಿರೂಪಿಸಿದರು. ತೇಜಸ್ವಿ ಸ್ವಾಗತಿಸಿದರು. ನಿತಿನ್ ಪ್ರಾರ್ಥನಾಗೀತೆ ಹಾಡಿದರು. ಲಕ್ಷ್ಮೀಶ್ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು ಹಾಗೂ ಶ್ರೀವತ್ಸರವರು ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು. ಭಾನುವಾರದಂದು ಸ್ಪರ್ಧಿಗಳಿಗೆ ಬೆಳಗಿನ ತಿಂಡಿ, ಮಧ್ಯಾಹ್ನದ ಊಟ, ಸಂಜೆಯ ಕಾಫಿ ಮತ್ತು ರಾತ್ರಿಯ ಊಟವನ್ನು ನೀಡಲಾಯಿತು.

## 2,00,000 ರೂ. ದೇಣಿಗೆ

**ಶ್ರೀಮತಿ ಸುಮಂಗಲ ಎಂ.ಕೆ. ರವರು ಬಬ್ಬೂರುಕಮ್ಮೆ ಸೇವಾ ಸಮಿತಿಗೆ 2,00,000 ರೂಪಾಯಿಗಳನ್ನು ದೇಣಿಗೆ ನೀಡಿ, ಇದನ್ನು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು ತಿಳಿಸಿರುತ್ತಾರೆ. ಶ್ರೀಮತಿ ಸುಮಂಗಲರವರಿಗೆ ಸಮಿತಿಯು ಧನ್ಯವಾದಗಳನ್ನು ಸಮರ್ಪಿಸುತ್ತದೆ.**

ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

# ಮಹಿಳಾ ವಿಭಾಗ – ಉತ್ತರ ಶಾಖೆ

## ಚಟುವಟಿಕೆಗಳ ವರದಿ



**ನವೆಂಬರ:** ಈ ತಿಂಗಳು ಕರ್ನಾಟಕ ರಾಜ್ಯೋತ್ಸವವನ್ನು ವಿಜ್ರಂಭಣೆಯಿಂದ ಆಚರಿಸಲಾಯಿತು. ನಾಗಮಣಿ ಕೃಷ್ಣಮೂರ್ತಿಯವರು ಕರ್ನಾಟಕದ ನಕ್ಷೆಯ ಕೆಂಪು ಹಳದಿ ಬಣ್ಣದ badge ಅನ್ನು ಎಲ್ಲರಿಗೂ ಕೊಟ್ಟರು. ನಂತರ ನಮ್ಮ ರಾಜ್ಯದ ಪ್ರಸಿದ್ಧ ಮೊದಲಿಗರ ಹೆಸರಿನ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಅಂಬಾ ರಾಮಕೃಷ್ಣ ಅವರು ಲಕೋಟೆಯೊಳಗೆ ಅದೃಷ್ಟ ಎಂಬ ಆಟವನ್ನು ಆಡಿಸಿದರು. ತಾಯಿ ಭುವನೇಶ್ವರಿಗೆ ಪೂಜೆ, ಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು.

**ಡಿಸೆಂಬರ್:** ಈ ತಿಂಗಳು ಪದ್ಮ ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕರ್ನಾಟಕದ ಊರುಗಳ ಹೆಸರುಗಳನ್ನು ಬರೆಯುವ ಆಟವನ್ನು ಆಡಿಸಿದರು. ವರ್ಷದ ಕೊನೆಯ ವಾರವಾದ್ದರಿಂದ ಎಲ್ಲರಿಗೂ ಸಿಹಿ ಹಂಚಿ, ವರ್ಷದ ಆಗುಹೋಗುಗಳ ಬಗ್ಗೆ ವಿಮರ್ಶೆ ಮಾಡಲಾಯಿತು.

**ಜನವರಿ:** ಈ ತಿಂಗಳು ಸಂಘದಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ಮಾಡಲಾಯಿತು. "Nestle products" ರವರ demonstration ಇತ್ತು. ಅವರು ತಮ್ಮ ಪದಾರ್ಥಗಳ ಪ್ರದರ್ಶನ ಮಾಡಿ, ಅದರ ಉಪಯೋಗಿಸುವ ಬಗೆಯನ್ನು ತಿಳಿಸಿ ಕೊಟ್ಟರು ಹಾಗು ಕೇಕ್, ಬಿಸಿಬೇಳೆಬಾತ್, ಬಾದಾಮಿ ಹಾಲು ಗಳನ್ನು ಮಾಡಿ ಕೊಟ್ಟರು. ಶಾಂತ ನಾಗರಾಜ್ ರವರು ಸಂಕ್ರಾಂತಿ ಹಬ್ಬದ ಬಗ್ಗೆ ಕೆಲವು ಮಾಹಿತಿಯನ್ನು ಕೊಟ್ಟರು. ಎಳ್ಳು ಬೆಲ್ಲ ಹಂಚಿ ಸಂಭ್ರಮಿಸಿದರು.

**ಫೆಬ್ರುವರಿ:** ಈ ತಿಂಗಳು ಉಮಾ ಶಿವರಾಮ್ ಮತ್ತು ಸರೋಜ ಶಂಕರನಾರಾಯಣ್ ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಾಮಾನ್ಯ ಜ್ಞಾನದ ರಸಪ್ರಶ್ನೆಗಳನ್ನು ಕೇಳಿ, ವಿಜೇತರಿಗೆ ಬಹುಮಾನ ವಿನಿಯೋಗ ಮಾಡಲಾಯಿತು. ಶಿವರಾತ್ರಿ ಪ್ರಯುಕ್ತ ಶಿವನ ಹಾಡುಗಳನ್ನು ಮೃಣಾಲಿನಿ ಅವರು ಹೇಳಿ ಕೊಟ್ಟರು.

**ಮಾರ್ಚ್:** ಈ ತಿಂಗಳು ಶಶಿಕಲ ಮತ್ತು ಲಕ್ಷ್ಮಿ ಶಂಕರ ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಮಹಿಳಾ ದಿನಾಚರಣೆಯ ಬಗ್ಗೆ ಚರ್ಚಿಸಲಾಯಿತು. ನಂತರ fork and coin ಆಟವನ್ನು ಆಡಿಸಿ ವಿಜೇತರಿಗೆ ಬಹುಮಾನ ನೀಡಲಾಯಿತು.




**ಶಶಿಕಲಾ ರವೀಂದ್ರ**
ಸಂಚಾಲಕಿ

## ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)

# ಮಹಿಳಾ ವಿಭಾಗ-ದಕ್ಷಿಣ ಶಾಖೆ

## ಚಟುವಟಿಕೆಗಳ ವರದಿ



ನವೆಂಬರ್ ಮೊದಲ ಸಭೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಎಲ್ಲಾ ಸದಸ್ಯೆಯರು ಕನ್ನಡ ರಾಜ್ಯೋತ್ಸವದ ಹಾಡುಗಳನ್ನು ಹಾಡಿದರು. ಕನ್ನಡದಲ್ಲಿ ಒಂದೂ ಆಂಗ್ಲ ಪದ ಬಳಸದೆ ಆಶುಭಾಷಣ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ನವೆಂಬರ್ ಎರಡನೇ ಸಭೆಯಲ್ಲಿ ಕಾರ್ತೀಕ ಮಾಸದ ಅಂಗವಾಗಿ ರುದ್ರಪಾರಾಯಣ, ಭಜನೆಯನ್ನು ಏರ್ಪಡಿಸಲಾಗಿತ್ತು. ಮಹಿಳಾ ಸದಸ್ಯಯರಿಂದಲೇ ರುದ್ರ ಪಾರಾಯಣ ಮಾಡಿದ್ದು ವಿಶೇಷವಾಗಿತ್ತು. ನಂತರ ಪ್ರಸಾದ ವಿನಿಯೋಗ ಮಾಡಲಾಯಿತು.

ಡಿಸೆಂಬರ್‌ನ ಮೊದಲ ಸಭೆಯಲ್ಲಿ ಗಣಿತದ ಆಟವನ್ನು ಆಡಿಸಲಾಯಿತು. ಮಹಿಳೆಯರು ಎಷ್ಟು ವೇಗವಾಗಿ ಲೆಕ್ಕಾಚಾರ ಮಾಡುತ್ತಾರೆ ಎಂದು ಈ ಆಟದಿಂದ ತಿಳಿಯಿತು. ಡಿಸೆಂಬರ್ ಎರಡನೆಯ ಸಭೆಯಲ್ಲಿ ಗೀತಾ ಜಯಂತಿಯನ್ನು ಆಚರಿಸಲಾಯಿತು. ಸದಸ್ಯೆಯರು ಕಡ್ಲೆಕಾಯಿ ಪರಿಷೆ, ಸುಬ್ರಹ್ಮಣ್ಯ ಷಷ್ಠಿ ಮತ್ತು ವಿಳ್ಳೆದೆಲೆಯ ಹಲವು ಉಪಯೋಗಗಳ ಬಗ್ಗೆ ಮಾಹಿತಿ ಕೊಟ್ಟರು.

ಜನವರಿ ಮೊದಲ ಸಭೆಯಲ್ಲಿ ಹೊಸವರ್ಷವನ್ನು ಆಚರಿಸಲಾಯಿತು. ವಿಶೇಷವಾದ ಗೇಮ್ ಷೋ ಏರ್ಪಡಿಸಿ ವಿಜೇತರಿಗೆ ಬಹುಮಾನವನ್ನು ಕೊಡಲಾಯಿತು. ಜನವರಿ ಎರಡನೆಯ

ಸಭೆಯಲ್ಲಿ ಅಯೋಧ್ಯೆಯಲ್ಲಿ ಶ್ರೀ ರಾಮ ಪ್ರತಿಷ್ಠಾಪನೆಯ ಅಂಗವಾಗಿ ವಿಶೇಷ ಪೂಜೆ ರಾಮತಾರಕ ಮಂತ್ರ ಜಪ, ಭಜನೆ, ಭಕ್ತಿಗೀತೆಗಳನ್ನು ಹಾಡಲಾಯಿತು. ಎಲ್ಲಾ ಸದಸ್ಯೆಯರು ದೀಪವನ್ನು ಹಚ್ಚಿ ಸಂಭ್ರಮಿಸಿದರು. ಪ್ರಸಾದ ವಿತರಣೆಯನ್ನು ಮಾಡಲಾಯಿತು.

ಫೆಬ್ರವರಿ ಮೊದಲ ಸಭೆಯಲ್ಲಿ ಕಿರುನಾಟಕಗಳ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಎಂಟು ಗುಂಪುಗಳು ಪ್ರದರ್ಶನ ನೀಡಿದರು. ಎಲ್ಲಾ ಸದಸ್ಯೆಯರ ನಟನೆಯು ಅದ್ಭುತವಾಗಿತ್ತು. ಫೆಬ್ರವರಿ ಎರಡನೆಯ ಸಭೆಯಲ್ಲಿ ಒಂದು ನಿಮಿಷದ ಆಟ ಮತ್ತು ರಸಪ್ರಶ್ನೆ ಕಾರ್ಯಕ್ರಮ ನಡೆಸಲಾಯಿತು.

ಮಾರ್ಚ್ ಮೊದಲ ಸಭೆಯಲ್ಲಿ "ಲಿಂಗ ತಾರತಮ್ಯ" ಎಂಬ ವಿಷಯದ ಬಗ್ಗೆ ಚರ್ಚಾಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಎಲ್ಲಾ ಸದಸ್ಯೆಯರೂ ಉತ್ಸಾಹದಿಂದ ಭಾಗವಹಿಸಿದರು. ಮಾರ್ಚ್ ಎರಡನೆಯ ಸಭೆಯಲ್ಲಿ ಸಂಗೀತ ಮತ್ತು ನೃತ್ಯ ಸ್ಪರ್ಧೆಯನ್ನು ನಡೆಸಲಾಯಿತು. ಈ ಕಾರ್ಯಕ್ರಮವನ್ನು ನಮ್ಮ ಸದಸ್ಯೆಯಾದ ಶ್ರೀಮತಿ ಗಿರಿಜಾ ಶಾಮಣ್ಣನವರು ಅವರ ತಾಯಿ ಶ್ರೀಮತಿ ಲಲಿತಮ್ಮ ಕೃಷ್ಣಮೂರ್ತಿಯವರ ಸ್ಮರಣಾರ್ಥ ಮತ್ತು ಅಂತರ್‌ರಾಷ್ಟ್ರಿಯ ಮಹಿಳಾ ದಿನದ ಅಂಗವಾಗಿ ಪ್ರಾಯೋಜಿಸಿದ್ದರು. ವಿಜೇತರಿಗೆ ಬಹುಮಾನ ವಿತರಣೆಯನ್ನು ಮಾಡಿದರು.

**ವಿಶೇಷ** : ಜನವರಿ 12ನೇ ತಾರೀಖು ನಮ್ಮ ಎಲ್ಲಾ ಸದಸ್ಯೆಯರ ಜೊತೆ ಮಂದಾರಗಿರಿ (ಬಸದಿ ಬೆಟ್ಟ) ಎಂಬ ಸ್ಥಳಕ್ಕೆ ಪ್ರವಾಸ ಹೋಗಿದ್ದೆವು. ನಂತರ ನಾಮದ ಚಿಲುಮೆ ಮತ್ತು ದೇವರಾಯನದುರ್ಗದ ನರಸಿಂಹಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ಹಿಂದಿರುಗಿದೆವು.

**ಗಾಯತ್ರಿ ವಿಶ್ವನಾಥ್**
ಸಂಚಾಲಕಿ



# ಸಂಸ್ಕೃತಿ ಸೌರಭದ ವರದಿ

| | |
|---|---|
| **ಸಂಸ್ಕೃತಿ ಸೌರಭ-4** | ದಿನಾಂಕ 30-04-2023 ರಂದು ನಡೆದ ಅಮೋಘ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ವಿನಯ್ ಎಸ್.ಆರ್. ಹಾಡುಗಾರಿಕೆ, ವಿದ್ವಾನ್ ಜಿ.ಎಸ್. ನಾಗರಾಜ್, ಮೃದಂಗ ಹಾಗೂ ವಿದ್ವಾನ್ ಜಿ.ವೆಂಕಟೇಶ್ ಜೋಶ್ಯರ್ ಅವರಿಂದ ಪಿಟೀಲು. |
| **ಸಂಸ್ಕೃತಿ ಸೌರಭ-5** | ದಿನಾಂಕ 28-05-2023 ರಂದು ನಡೆದ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ವಿದುಷಿ ಶ್ರುತಿ ಕಾರಕೋಡ್ಲು - ಗಾಯನ, ವಿದ್ವಾನ್ ಶ್ರೀನಿವಾಸ್ ಅನಂತರಾಮಯ್ಯ - ತಬಲ ಹಾಗೂ ವಿದ್ವಾನ್ ರುದ್ರಾರಾಧ್ಯ - ಕೀ ಬೋರ್ಡ್ |
| **ಸಂಸ್ಕೃತಿ ಸೌರಭ-6** | ದಿನಾಂಕ 25-06-2023 ರಂದು ನಡೆದ ಗಮಕ ವಾಚನ ಕಾರ್ಯಕ್ರಮದಲ್ಲಿ ಸಿ.ಎನ್. ಸುಬ್ಬಣ್ಣ - ವ್ಯಾಖ್ಯಾನ, ಡಾ. ವಿದುಷಿ ಶ್ಯಾಮಲಾ ಪ್ರಕಾಶ್ - ವಾಚನ |
| **ಸಂಸ್ಕೃತಿ ಸೌರಭ-7** | ದಿನಾಂಕ 30-07-2023 ರಂದು ನಡೆದ ಅಮೋಘ ಕೊಳಲುವಾದನ ಕಾರ್ಯಕ್ರಮದಲ್ಲಿ ವಿದ್ವಾನ್ ಅಮಿತ್ ನಾಡಿಗ್ - ವೇಣುವಾದನ, ವಿದ್ವಾನ್ ಭಾರದ್ವಾಜ್ ಆರ್. ಸಾತವಳ್ಳಿ - ಮೋರ್ಸಿಂಗ್, ವಿದ್ವಾನ್ ಆನಂದ್ ಬಿ.ಎಸ್. - ಮೃದಂಗ |
| **ಸಂಸ್ಕೃತಿ ಸೌರಭ-8** | ದಿನಾಂಕ 27-08-2023 ರಂದು ನಡೆದ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ನಾಗಚೇತನ್ ಎಸ್. ಎಂ. - ಹಾಡುಗಾರಿಕೆ, ವಿದ್ವಾನ್ ಕೃತಿಕ್ ಕೌಶಿಕ್ - ಪಿಟೀಲು ಹಾಗೂ ವಿದ್ವಾನ್ ಬಿ. ಎಸ್. ಪ್ರಶಾಂತ್ - ಮೃದಂಗ, |
| **ಸಂಸ್ಕೃತಿ ಸೌರಭ-11** | ದಿನಾಂಕ 24-09-2023 ರಂದು ವಿದುಷಿ ಶ್ರೀಮತಿ ನಿವೇದಿತ ಶರ್ಮ ನಾಡಿಗ್ ಹಾಗೂ ಶಿಷ್ಯವೃಂದದವರಿಂದ ಭರತನಾಟ್ಯ ಕಾರ್ಯಕ್ರಮ ನಡೆಸಲಾಯಿತು. |
| **ಸಂಸ್ಕೃತಿ ಸೌರಭ-12** | ದಿನಾಂಕ 29-10-2023 ರಂದು ನಡೆದ ವಾದನ-ಗಾಯನ-ನರ್ತನ ಕಾರ್ಯಕ್ರಮದಲ್ಲಿ ಸ್ವರ ಸಂಭ್ರಮ ಸಂಗೀತ ಶಾಲೆ ಮಕ್ಕಳಿಂದ - ಗಾಯನ ಮತ್ತು ಭರತನಾಟ್ಯ. ಸಮರ್ಥ ಮಹೇಶ್ ರವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. |
| **ಸಂಸ್ಕೃತಿ ಸೌರಭ-13** | ದಿನಾಂಕ 26-11-2023 ರಂದು ನಡೆದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲ್ಲಿ ವಿದುಷಿ ವಿಜಯಲಕ್ಷ್ಮೀ ಬಿ.ಎಸ್. - ಗಾಯನ, ಕು. ಅಖಿಲ ವಿ. ಭಟ್ಟ -ಸಹಗಾಯನ, ವಿದ್ವಾನ್ ನರೇಂದ್ರ - ಪಿಟೀಲು, ವಿದ್ವಾನ್ ಎನ್. ಗುರುಮೂರ್ತಿ - ಮೃದಂಗ. |
| **ಸಂಸ್ಕೃತಿ ಸೌರಭ-14** | ದಿನಾಂಕ 25-02-2024 ರಂದು ನಡೆದ ವೀಣಾ ವಾದನ ಕಾರ್ಯಕ್ರಮದಲ್ಲಿ ವಿದುಷಿ ರಮ್ಯ ಗಿರೀಶ್ - ವೀಣಾ ವಾದನ, ವಿದ್ವಾನ್ ಆನಂದ್ ಬಿ.ಎಸ್. - ಮೃದಂಗ, ವಿದ್ವಾನ್ ಅಭಿಜಿತ್ ಆರ್. - ಮೋರ್ಚಿಂಗ್ |
| **ಸಂಸ್ಕೃತಿ ಸೌರಭ-15** | ದಿನಾಂಕ 31-03-2024 ರಂದು ನಡೆದ ಯುಗಳ ವೇಣುವಾದನ ಕಾರ್ಯಕ್ರಮದಲ್ಲಿ ವಿದ್ವಾನ್ ಹೇರಂಬ್ ಸತ್ಯಪ್ರಸಾದ್ ಮತ್ತು ವಿದ್ವಾನ್ ಹೇಮಂತ್ ಸತ್ಯಪ್ರಸಾದ್ - ವೇಣು ವಾದನ, ವಿದ್ವಾನ್ ಸುನಿಲ್ ಸುಬ್ರಹ್ಮಣ್ಯ - ಮೃದಂಗ, ವಿದ್ವಾನ್ ಎನ್. ಕಾರ್ತಿಕ್ ಪವನ್ - ಮೋರ್ಚಿಂಗ್ |

# ಸ್ಮರಣಾರ್ಥ ಭೋಜನ ವ್ಯವಸ್ಥೆ ದಾನಿಗಳಲ್ಲಿ ಮನವಿ

**ಮಾನ್ಯ ಸದಸ್ಯ ಬಂಧುಗಳೇ,**

ತಾವು ತಮ್ಮ ಪೂರ್ವಜರು, ಹಿರೀಕರು, ಮಾತಾಪಿತೃಗಳು ಹಾಗೂ ಇತರೆ ಸಂಬಂಧಿಗಳ ಹೆಸರಿನಲ್ಲಿ ಅವರ ಗೌರವ ಮತ್ತು ಪುಣ್ಯ ಸ್ಮರಣಾರ್ಥವಾಗಿ ಮುದುವಟ್ಟು ಸ್ಥಾಪಿಸಿ ವರುಷಕ್ಕೊಂದು ದಿನ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಭೋಜನ ಏರ್ಪಡಿಸುತ್ತಿರುವುದು ಸರಿಯಷ್ಟೇ. ಇಂತಹ ಒಂದು ಅವಕಾಶವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಸಮಿತಿಗೆ ವಹಿಸಿರುವುದು ನಮ್ಮ ಪುಣ್ಯವಿಶೇಷವೇ ಸರಿ ಮತ್ತು ಈ ಹೊಣೆಯನ್ನು ನಾವು ಅತ್ಯಂತ ಸಮರ್ಥವಾಗಿ ಮತ್ತು ಶ್ರದ್ಧಾಪೂರ್ವಕವಾಗಿ ನೆರವೇರಿಸುತ್ತಾ ಬಂದಿದ್ದೇವೆ.

ಆದರೆ ಈಗ ಬ್ಯಾಂಕ್ ಬಡ್ಡಿ ದರಗಳಲ್ಲಿ ತೀವ್ರ ಇಳಿಕೆ ಆಗಿರುವುದರಿಂದಲೂ, ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಸಂಖ್ಯೆ ವರುಷದಿಂದ ವರುಷಕ್ಕೆ ಹೆಚ್ಚುತ್ತಿರುವುದರಿಂದಲೂ, ಎಲ್ಲಾ ಅಗತ್ಯವಸ್ತುಗಳ ದರದಲ್ಲಿ ತೀವ್ರ ಏರಿಕೆಯಾಗಿರುವುದರಿಂದಲೂ ಹಿಂದಿನ ಮುದುವಟ್ಟಿನ ಹಣದ ಮೇಲೆ ಬರುತ್ತಿರುವ ಬಡ್ಡಿಯಿಂದ ಭೋಜನ ವ್ಯವಸ್ಥೆ ಮಾಡುವುದು ಕಷ್ಟಸಾಧ್ಯವಾಗಿರುತ್ತದೆ. ಈಗಿರುವ ವಿದ್ಯಾರ್ಥಿಗಳಿಗೆ ಒಂದು ದಿನದ ಭೋಜನ ವ್ಯವಸ್ಥೆ ಮಾಡಲು ಕನಿಷ್ಟ ರೂ.5000/–ದ ಅಗತ್ಯವಿರುತ್ತದೆ. ಇಷ್ಟು ಹಣ ವಾರ್ಷಿಕವಾಗಿ ಬ್ಯಾಂಕ್ ಬಡ್ಡಿಯ ರೂಪದಲ್ಲಿ ಸಂದಾಯವಾಗುವ ರೀತಿಯಲ್ಲಿ ತಾವು ತಮ್ಮ ಮುದುವಟ್ಟಿನ ಮೊತ್ತವನ್ನು ಹೆಚ್ಚಿಸಬೇಕಿರುತ್ತದೆ.ಸುಮಾರು ಕನಿಷ್ಠ 70,000/–(ರೂಪಾಯಿ ಎಪ್ಪತ್ತು ಸಾವಿರ, ಹೆಚ್ಚೂ ಕೊಡಬಹುದು) ರೂಪಾಯಿಗಳನ್ನು ಮುದುವಟ್ಟಾಗಿಟ್ಟರೆ ಈ ವಾರ್ಷಿಕ ಭೋಜನ ವ್ಯವಸ್ಥೆಯನ್ನು ತಮ್ಮ ಸ್ಮರಣೆಯ ಹಿರಿಯರ ನೆನಪಲ್ಲಿ ಅತ್ಯಂತ ಸಮರ್ಪಕವಾಗಿ ನಡೆಸಬಹುದಾಗಿರುತ್ತದೆ. ಹೀಗಾಗಿ ಹೊಸದಾಗಿ ಸ್ಮರಣಾರ್ಥ ಮುದುವಟ್ಟು ಸ್ಥಾಪಿಸುವವರು ರೂ.70ಸಾವಿರ ಮತ್ತು ಈಗಾಗಲೇ ಮುದುವಟ್ಟು ಸ್ಥಾಪಿಸಿರುವವರು ಈಗಿರುವ ಮೊತ್ತದ ಜೊತೆಗೆ 70 ಸಾವಿರಕ್ಕೆ ಹೊಂದಿಕೆಯಾಗುವ ಹೆಚ್ಚಿಗೆ ಮೊತ್ತ (ಉದಾಹರಣಗೆ ಈಗ 40 ಸಾವಿರ ಮುದುವಟ್ಟಿದ್ದರೆ ಹೆಚ್ಚುವರಿಯಾಗಿ 30 ಸಾವಿರ ನೀಡುವುದು) ನೀಡಿ ತಮ್ಮ ಹಿರಿಯರ ಸ್ಮರಣಾರ್ಥ ಭೋಜನ ವ್ಯವಸ್ಥೆಯನ್ನು ನಿರಂತರವಾಗಿ ಮುಂದುವರಿಸಲು ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇವೆ. ಹಾಗೆಯೇ ಮುದುವಟ್ಟು ಸ್ಥಾಪಿಸದೆಯೂ ವಾರ್ಷಿಕವಾಗಿ ರೂ. 5ಸಾವಿರ ನೀಡಿ ತಮ್ಮ ಹಿರಿಯರ ಸ್ಮರಣಾರ್ಥ ಭೋಜನದ ವ್ಯವಸ್ಥೆಯನ್ನು ಮಾಡಬಹುದಾಗಿರುತ್ತದೆ.

**– ಡಾ.ಎನ್. ಸತ್ಯಪ್ರಕಾಶ್**
ಗೌರವ ಕಾರ್ಯದರ್ಶಿ

## ಗಣಕೀಕರಣ ಉಪಸಮಿತಿ

ಶ್ರೀ ಜಿ.ವಿ. ರಮೇಶ್ : ಸಂಚಾಲಕರು
ಶ್ರೀ ಎಸ್.ಎಂ. ನಾಗರಾಜ್ : ಸದಸ್ಯರು
ಶ್ರೀಮತಿ ಸುಧಾಪ್ರಸಾದ್ : ಸದಸ್ಯರು
ಶ್ರೀ ಎನ್.ಡಿ. ರವಿ : ಸದಸ್ಯರು

ಎಲ್ಲಾ ಪದಾಧಿಕಾರಿಗಳು

## ಕ್ಷೇಮ ಸಮಾಚಾರ ಆಂತರಿಕ ಪತ್ರಿಕೆ ಉಪಸಮಿತಿ

ಡಾ॥ ಎ.ವಿ. ಪ್ರಸನ್ನ : ಪ್ರಧಾನ ಸಂಪಾದಕರು
ಶ್ರೀ ಎಲ್.ಎನ್. ಪ್ರಸಾದ್ : ಸದಸ್ಯರು
ಶ್ರೀಮತಿ ಕೆ. ಶೀಲಾ : ಸದಸ್ಯರು
ಶ್ರೀಮತಿ ಸುಮಾ ಪ್ರಕಾಶ್ : ಸದಸ್ಯರು

ಎಲ್ಲಾ ಪದಾಧಿಕಾರಿಗಳು

## ವಿದ್ಯಾರ್ಥಿ / ವಿದ್ಯಾರ್ಥಿನಿಲಯದ ಉಪಸಮಿತಿ

ಶ್ರೀ ಎನ್. ಶಿವಮೂರ್ತಿ : ಸಂಚಾಲಕರು
ಶ್ರೀ ನಂಜುಂಡಸ್ವಾಮಿ ಎಂ.ಎಸ್ : ಸದಸ್ಯರು
ಶ್ರೀಮತಿ ಸುಮಾ ಪ್ರಕಾಶ್ : ಸದಸ್ಯರು
ಶ್ರೀ ಪ್ರಕಾಶ್ ಎಂ.ಜಿ : ಸದಸ್ಯರು
ಶ್ರೀ ನಾಗರಾಜ್ ಕೆ.ಎಸ್ : ಸದಸ್ಯರು

## ಮಹಿಳಾ ವಿಭಾಗ ಉಪಸಮಿತಿ

ಶ್ರೀಮತಿ ಕೆ. ಶೀಲಾ
ಶ್ರೀಮತಿ ಸುಮಾ ಪ್ರಕಾಶ್
ಶ್ರೀಮತಿ ಮೇಖಲಾ ದ್ವಾರಕಾನಾಥ್

## ಕ್ರೀಡೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉಪಸಮಿತಿ

ಶ್ರೀಮತಿ ಸುಮಾ ಪ್ರಕಾಶ್ : ಸಂಚಾಲಕರು
ಶ್ರೀ ಎನ್. ಶಿವಮೂರ್ತಿ : ಸದಸ್ಯರು
ಶ್ರೀ ನಾಗರಾಜ್ ಎಸ್.ಎಂ. : ಸದಸ್ಯರು
ಶ್ರೀಮತಿ ಸುಧಾ ಪ್ರಸಾದ್ : ಸದಸ್ಯರು
ಶ್ರೀ ಶೇಷಾದ್ರಿ .ಆರ್ : ಸದಸ್ಯರು

ಎಲ್ಲಾ ಪದಾಧಿಕಾರಿಗಳು

## ಆರ್ಥಿಕ ಉಪಸಮಿತಿ

ಶ್ರೀ ಗುರುದತ್ತ ಪಿ.ಎಸ್ : ಸಂಚಾಲಕರು
ಶ್ರೀಮತಿ ಕೆ. ಶೀಲಾ : ಸದಸ್ಯರು
ಶ್ರೀ ರಮೇಶ್ .ಜಿ.ವಿ : ಸದಸ್ಯರು

ಎಲ್ಲಾ ಪದಾಧಿಕಾರಿಗಳು

## ಕಟ್ಟಡದ ಉಪಸಮಿತಿ

ಶ್ರೀ ಜಿ.ವಿ. ರಮೇಶ್ : ಸಂಚಾಲಕರು

ಎಲ್ಲಾ ಪದಾಧಿಕಾರಿಗಳು

PRINTED MATTER

BOOK-POST



**ಶ್ರೀಮತಿ ಶಾರದಮ್ಮ ಎಂ.ವಿ. ದೇವರಯ್ಯ ವಿದ್ಯಾರ್ಥಿನಿಯರ ನಿಲಯ**

ನಂ.344, 36ನೇ 'ಎ' ಕ್ರಾಸ್, 9ನೇ ಮುಖ್ಯರಸ್ತೆ,
5ನೇ ಬ್ಲಾಕ್, ಜಯನಗರ, ಬೆಂಗಳೂರು–560041

Smt./Sri.......................................................

.......................................................................

.......................................................................

If undelivered please return to :

Reg. No. 246/34-35

The Secretary

**BABBOORKAMME SEVA SAMITHI (R.)**

Dewan Bahadur K. Ramaswamy Students Home
No. 17, Seshadri Road, Bangalore - 560 009
Phone: 22281848, Cell : 9380301904 | www.babboorkamme.org

Babboorkamme Kshema Samachara, Printed for and on behalf of Babboorkamme Seva Samithi,
Edited by : Dr. N. Sathyaprakash and Printed at Padmashree Printers Bangalore - 560 010, Ph. 9880083321

ಬನ್ನಿ ಸಮಿತಿಯ ಏಳಿಗೆಗಾಗಿ ಶ್ರಮಿಸೋಣ